ಸಂಪುಟ: 01 ಸಂಚಿಕೆ: 13 ಪುಟ: 04 ಬೆಲೆ: 02 ಬುಧವಾರ ಜೂನ್ 17 2026 ಮೊ: 7411699198/7406928404

# ಅಜಾತ ಶತ್ರು

ಜನರ ನುಡಿ.... ಕೊಪ್ಪಳದಿಂದ ಏಕಕಾಲಕ್ಕೆ ಪ್ರಕಟ ಸತ್ಯದ ಧ್ವನಿ...

ಕನ್ನಡ ದಿನ ಪತ್ರಿಕೆ

ಪ್ರದೀಪಕುಮಾರ
ಸಂಪಾದಕರು




Volume:01 Issue:13 Pages:04 Price:02 WEDNESDAY JUNE 17 2026 RNI NO: KNKAN/26/A4008 E-mail:ajathashathru2026@gmail.com

## ಸತ್ಯವಾಣಿ ಕಟೋಕ್ತಿ

ಅಂತರ್ಯ ಸುಖದ
ಮುಂದೆ ಕಾಲ, ಸ್ಥಳ,ವ್ಯಕ್ತಿ
ಪ್ರತಿ ವಸ್ತುವು ನಶ್ವರ
ಎನಿಸಿದಾಗಷ್ಟೆ ಮನವು
ಸುಂದರ ಸಮೃದದ
ಮಂದಿರವಾಗುತ್ತದೆ.



ವಾಣಿ ಭಂಡಾರಿ.

## ಭಾರತದ ಅಭಿವೃದ್ಧಿ ವಿಶ್ವ ಶಾಂತಿ ಸಮೃದ್ಧಿಯ ಸಂಕೇತ

# ಮೋಹನ್ ಭಾಗವತ್

ನವದೆಹಲಿ: ಭಾರತವು ವಿಶ್ವಗುರುವಾಗಿ ಹೊರಹೊಮುವಾಗ ತನ್ನ ನಾಗರಿಕತೆಯ ಮೌಲ್ಯಗಳನ್ನು ಆಧಾರವಾಗಿಟ್ಟುಕೊಂಡು ವಿಶ್ವಕ್ಕೆ ಶಾಂತಿ ಮತ್ತು ಸಮೃದ್ಧಿಯನ್ನು ನೀಡುವ ದಿಕ್ಕಿನಲ್ಲಿ ಸಾಗಬೇಕು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ್ ಭಾಗವತ್ ಹೇಳಿದ್ದಾರೆ. ದೆಹಲಿ ನಗರದಲ್ಲಿ ಹೀರೋ ಎಂಟರ್‌ಪ್ರೈಸ್ ಆಯೋಜಿಸಿದ್ದ 18ನೇ ಬಿಎಂಎಲ್ ಮುಂಜಾಲ್ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮುಖ್ಯ ಭಾಷಣ ಮಾಡಿದ ಅವರು, ಶ್ರಮದ ಘನತೆ, ಸಂಪತ್ತಿನ ಸಮಾನ ಹಂಚಿಕೆ, ನೈತಿಕ ಸಂಪತ್ತಿನ ಸೃಷ್ಟಿ ಹಾಗೂ ರಾಷ್ಟ್ರ ನಿರ್ಮಾಣದಲ್ಲಿ ಯುವಜನರ ಪಾತ್ರದ ಮಹತ್ವವನ್ನು ಒತ್ತಿಹೇಳಿದರು.

ಭಾರತವು ಕೇವಲ ಭೌಗೋಳಿಕ ಪ್ರದೇಶದ ಹೆಸರಲ್ಲ. ಇದು ಸಾವಿರಾರು ವರ್ಷಗಳ ನಾಗರಿಕತೆಯ ಅಸ್ತಿತ್ವವಾಗಿದೆ. ಅನೇಕ ಆಕ್ರಮಣಗಳು, ವಿದೇಶಿ ಆಳ್ವಿಕೆ



ಹಾಗೂ ಐತಿಹಾಸಿಕ ಸವಾಲುಗಳನ್ನು ಎದುರಿಸಿ ಉಳಿದುಕೊಂಡಿರುವ ಶಾಶ್ವತ ಸಂಸ್ಕೃತಿ ಭಾರತದ್ದಾಗಿದೆ ಎಂದು ಅವರು ಹೇಳಿದರು. ಗಂಗಾನದಿಯನ್ನು ಉದಾಹರಿಸಿ ಮಾತನಾಡಿದ ಭಾಗವತ್ ಗಂಗೆ ಸಾವಿರಾರು ವರ್ಷಗಳಿಂದ ಹರಿಯುತ್ತಿದೆ. ಅದು ಪುರಾತನವಾದರೂ ಅದರ ನೀರು ಸದಾ ಹೊಸದಾಗಿರುತ್ತದೆ. ಭಾರತವೂ ಶಾಶ್ವತ ಮತ್ತು ಸದಾ ನವೀಕೃತವಾಗಿರುವ ನಾಗರಿಕತೆ ಎಂದರು.

ಭಾರತದ ಬೆಳವಣಿಗೆಯಿಂದ ಕೇವಲ ದೇಶಕ್ಕಷ್ಟೇ ಅಲ್ಲ, ಇಡೀ ವಿಶ್ವಕ್ಕೂ ಪ್ರಯೋಜನವಾಗಲಿದೆ ಎಂದು ಅವರು ಅಭಿಪ್ರಾಯಪಟ್ಟರು. ಭಾರತ ಉದಯಿಸಿದಾಗ ಕೇವಲ ಭಾರತಕ್ಕೆ ಮಾತ್ರ ಲಾಭವಾಗುವುದಿಲ್ಲ. ವಿಶ್ವದಾದ್ಯಂತ ಶಾಂತಿ ಮತ್ತು ಸಂತೋಷ ಹರಡುತ್ತದೆ. ವ್ಯಕ್ತಿಯ ಕಲ್ಯಾಣ, ರಾಷ್ಟ್ರದ ಅಭಿವೃದ್ಧಿ ಮತ್ತು ಮುಂದಿನ ಪೀಳಿಗೆಯ ಹಿತ ಈ ಮೂರೂ ಗುರಿಗಳು ಒಂದೇ ಪ್ರಯತ್ನದಲ್ಲಿ ಸಾಧನೆಯಾಗುತ್ತವೆ, ಎಂದು ಹೇಳಿದರು. ಮುಂದಿನ 20ರಿಂದ 30 ವರ್ಷಗಳಲ್ಲಿ ಭಾರತವು ವಿಶ್ವದ ಅಗ್ರ ರಾಷ್ಟ್ರವಾಗಿ ಹೊರಹೊಮಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದ ಅವರು, ಭಾರತ ವಿಶ್ವಗುರುವಾಗಲಿದೆ. ಅದು ಶಕ್ತಿಶಾಲಿಯಾಗಲಿದೆ.

ಆದರೆ ಆ ಶಕ್ತಿಯನ್ನು ವಿಶ್ವದ ಕಲ್ಯಾಣಕ್ಕಾಗಿ ಬಳಸಲಿದೆ. ಮಾನವಕುಲಕ್ಕೆ ಮಾರ್ಗದರ್ಶಕವಾಗಲಿದೆ. ಇದೇ ನಮ್ಮ ದೃಷ್ಟಿಕೋನ, ಎಂದರು.

4ನೇ ಪುಟಕ್ಕೆ

## ಜಿಲ್ಲಾ ಮಟ್ಟದ ಯೋಗ ಸ್ಪರ್ಧೆ :ಶರಣಪ್ಪ ಮೂರನೇ ಸ್ಥಾನ

ಅ.ಶ. ಸುದ್ದಿ ಯಲಬುರ್ಗಾ

ಯಲಬುರ್ಗಾ: ಶ್ರೀ ಬಸವಲಿಂಗೇಶ್ವರ ಯೋಗ ತರಬೇತಿ ಕೇಂದ್ರದ ಶ್ರೀಕಾಂತ ಶರಣಪ್ಪ ಕನಕೊಪ್ಪ, 25 ವರ್ಷದ ಒಳಗಿನವರ ಸ್ಪರ್ಧೆಯಲ್ಲಿ ಕೊಪ್ಪಳ ಜಿಲ್ಲೆಗೆ ಮೂರನೇ ಸ್ಥಾನವನ್ನು ಪಡೆದಿದ್ದಾರೆ. ತರಬೇತಿದಾರರಾದ ಉಮೇಶ್ ಕುಂಬಾರ ಹರ್ಷ ವ್ಯಕ್ತ ಪಡಿಸಿ ಮಾತನಾಡಿ ಯೋಗ ಕೇಂದ್ರದ ಗುರುಗಳಾದ ಶ್ರೀ ಷ. ಯೋಗ ಬ್ರಹ್ಮ ಗುರು ಬಸವಲಿಂಗೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳ ಕೃಪಾ ಆಶೀರ್ವಾದದಿಂದ ಶ್ರೀಕಾಂತ ಇವರಿಗೆ ರಾಜ್ಯ ರಾಷ್ಟ್ರ ಮಟ್ಟದಲ್ಲಿ ಪ್ರಶಸ್ತಿಗಳು ಸ್ಥಾನಮಾನಗಳು ಲಭಿಸಲೆಂದು ಶ್ರೀಮಠದ ಪರವಾಗಿ ಹೃದಯಪೂರ್ವಕವಾದ ಅಭಿನಂದನೆಯನ್ನು ತಿಳಿಸಿದರು.



ಅವರು ಕೊಪ್ಪಳದಲ್ಲಿ ನಡೆದ 12ನೇ ವರ್ಷದ ಅಂತರಾಷ್ಟ್ರೀಯ ಯೋಗ ದಿನಾಚರಣೆಯ ಪ್ರಯುಕ್ತ ಜಿಲ್ಲಾ ಮಟ್ಟದ ಯೋಗ ಸ್ಪರ್ಧೆಯಲ್ಲಿ ಯಲಬುರ್ಗಾ ನಗರದ ಶ್ರೀ ಬಸವಲಿಂಗೇಶ್ವರ ಯೋಗ ತರಬೇತಿ ಕೇಂದ್ರದ ಶ್ರೀಧರ ಮುರಡಿ ಹಿರೇಮಠದ ಸದಸ್ಯರು ಭಾಗವಹಿಸಿ ಉತ್ತಮ ಸಾಧನೆಗೈದಿದ್ದಕ್ಕಾಗಿ ಅವರನ್ನು ಅಭಿನಂದಿಸಿ ಮಾತನಾಡಿದರು. ನಂತರ ಪೂಜ್ಯರು ರು ತಮ್ಮ ಆಶೀರ್ವಾದದಲ್ಲಿ ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲಾ ಯೋಗ ಸಾಧಕ–ರಿಗೂ ಹಾಗೂ ಜಿಲ್ಲೆಗೆ ಮೂರನೇ ಸ್ಥಾನವನ್ನು ಪಡೆದ ಶ್ರೀಕಾಂತನಿಗೂ ಭಗವಂತನ ಕೃಪ ಆಶೀರ್ವಾದ ಲಭಿಸಲಿ, ನಮ್ಮ ಯೋಗ ಕೇಂದ್ರದ ಯೋಗ ಸಾಧಕರು ಮತ್ತಷ್ಟು ಯೋಗದಲ್ಲಿ ಸಾಧನೆಗೈದು ತಂದೆ ತಾಯಿ ಊರಿಗೂ ನಮ್ಮ ಯೋಗ ಕೇಂದ್ರಕ್ಕೂ ಹೆಸರನ್ನು ತರುವಂತ ಶಕ್ತಿ ಆ ಭಗವಂತ ಅವರಿಗೆ ಕರುಣಿಸಲಿ ಎಂದು ಶುಭ ಹಾರೈಸಿದರು. ಈ ಸಂದರ್ಭದಲ್ಲಿ ವಿರೂಪಾಕ್ಷಪ್ಪ, ರಾಚಮ್ಮ ಗದ್ದಿ, ಬಸಮ್ಮ, ವಿಜಯಲಕ್ಷ್ಮಿ, ಸಾತ್ವಿಕ್, ಇಂಚರ, ರಾಜೇಶ್ವರಿ, ಸುಮಾ, ಶ್ರೀಕಾಂತ, ಮಲ್ಲಿಕಾರ್ಜುನ, ನಾಗರಾಜ್, ಪೂಜಾ, ಶ್ರೇಯಾ, ಕೃತಿಕಾ, ವೀಣಾ, ಸಮರ್ಥ, ಶಶಿಧರ, ಹಾಗೂ ಯೋಗ ತರಬೇತಿದಾರ ಉಮೇಶ್ ಕುಂಬಾರ ಇನ್ನಿತರರು ಇದ್ದರು.

# ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪುರಸ್ಕಾರ



ಅ.ಶ. ಸುದ್ದಿ ಗದಗ

ಗಂಗಾವತಿ: ನಗರದ ಹೊಸಹಳ್ಳಿ ರಸ್ತೆ ಸಣ್ಣ ಹುಲಗಪ್ಪ ಇವರ ಜಾಗದಲ್ಲಿ ಇಂದು ಹಡಪದ ಅಪ್ಪಣ್ಣ ಸಮಾಜ ಸಮಿತಿ ವತಿಯಿಂದ ಪ್ರಥಮ ಜಗದ್ಗುರು ಶ್ರೀ ಲಿಂ. ಬಸವಪ್ರೀಯ ಹಡಪದ ಅಪ್ಪಣ್ಣರವರ 18ನೇ ವರ್ಷದ ಪುಣ್ಯಸ್ಮರಣೋತ್ಸವದ ಅಂಗವಾಗಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಗಳಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಶ್ರೀ ಕೋಲ್ಲಿ ನಾಗೇಶ್ವರ ಪದವಿ ಪೂರ್ವ ಕಾಲೇಜು ಉಪನ್ಯಾಸಕ ಎ. ಕೆ.ಮಹೇಶ ಮಾತನಾಡಿ ಉದ್ಯೋಗ ಜಾತಿ ಅಲ್ಲ ಅದು ವೃತ್ತಿಪರತೆ. ಆದರೇ ಪ್ರತಿಯೊಬ್ಬ ವ್ಯಕ್ತಿಯ ತಲೆ ಮೇಲೆ ಕೈ ಇಡುವದು ತಾಯಿ ಬಿಟ್ಟರೇ ಹಡಪದ ಅಪ್ಪಣ್ಣ ಸಮಾಜದವರಿಗೆ ಮಾತ್ರ ಅವಕಾಶ ಇರುತ್ತದೆ. ಅವರು ಬಿಟ್ಟರೆ ಯಾರು ನಮ್ಮ ತಲೆಯ ಮೇಲೆ ಕೈ ಇಡಲಾರರು ಎಂದು ಮಾರ್ಮಿಕವಾಗಿ ಹೇಳಿದರು. ಶಿಕ್ಷಣ ಸಮಾಜದ ಅಭಿವೃದ್ಧಿಗೆ ಮೂಲ ಆದ–ಾರವಾಗಿದ್ದು, ವಿದ್ಯಾರ್ಥಿಗಳು ನಿರಂತರ ಪರಿಶ್ರಮ ಮತ್ತು ಶಿಸ್ತಿನಿಂದ ಉನ್ನತ ಗು–ರಿಗಳನ್ನು ಸಾಧಿಸಬೇಕು ಎಂದು ಕರೆ ನೀಡಿದರು.

ಸಮಾಜದ ವತಿಯಿಂದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿ ಗೌರವಿಸುವುದು ಇತರ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗುತ್ತದೆ ಎಂದು ಅವರು ಹೇಳಿದರು. ಪ್ರಥಮ ಜಗದ್ಗುರು ಶ್ರೀ ಲಿಂ. ಬಸವಪ್ರೀಯ ಹಡಪದ ಅಪ್ಪಣ್ಣರವರ ಆದರ್ಶಗಳು ಸಮಾಜದ ಏಳಿಗೆಗೆ ದಾರಿದೀಪವಾಗಿದ್ದು, ಅವರ ಸ್ಮರಣಾರ್ಥವಾಗಿ ಹಮ್ಮಿಕೊಳ್ಳಲಾಗುತ್ತಿರುವ ಇಂತಹ ಕಾರ್ಯಕ್ರಮಗಳು ಸಮಾಜದ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಬೆಳವಣಿಗೆಗೆ ಸಹಕಾರಿಯಾಗಿವೆ ಎಂದು ಅಭಿಪ್ರಾಯಪಟ್ಟರು. ಈ ಸಂದರ್ಭದಲ್ಲಿ. ಸಮಾಜದ ಹಿರಿಯ ಮುಖಂಡ ಹನುಮಂತಪ್ಪ ಸರಿಗಮ, ಹೆಚ್. ಮಂಜುನಾಥ ಕನಕಗಿರಿ, ಹಡಪದ ಅಪ್ಪಣ್ಣ ಸಮಾಜದ ತಾಲೂಕು ಅಧ್ಯಕ್ಷ ನಿರುಪಾದಿ ಕೆಸರಟ್ಟಿ, ಯುವ ಘಟಕ ಅಧ್ಯಕ್ಷ ವಿಕ್ರಮ್ ಪಾಟೀಲ್,

ತಾಲೂಕು ಪ್ರಧಾನ ಕಾರ್ಯದರ್ಶಿ ಶರಣಪ್ಪ ಜನಾಪೂರು, ಶರಣಬಸವಗೌಡ ಆಗೋಲಿ, ಸಮಾಜದ ಮುಖಂಡರಾದ ವೀರಭದ್ರಪ್ಪ ಹೆಚ್,ಶರಣಬಸಪ್ಪ ಹೆಚ್, ಶರಣಪ್ಪ ಎಸ್.ಬಿ.ನಗರ,ಶಿವಣ್ಣ ಸೇರಿದಂತೆ ಇತರರು ಇದ್ದರು. ಎಸ್.ಡಿ.ಎಮ್. ಸಿ ಅಧ್ಯಕ್ಷ ಬಸವರಾಜ, ಕಾರ್ಯಕ್ರಮ ನಿರೂಪಿಸಿದರು. ಈ ವೇಳೆ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಲಾಯಿತು. ಸಮಿತಿಯ ಪದಾಧಿಕಾರಿಗಳು, ಸಮಾಜದ ಹಿರಿಯರು, ಪಾಲಕರು ಹಾಗೂ ಸಮಾಜದ ಬಂಧುಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಎಚ್.ಕೆ. ಪಾಟೀಲರಿಗೆ ಸಚಿವ ಸ್ಥಾನ ನೀಡಲು ಆಗ್ರಹಿಸಿ ಬೃಹತ್ ಪ್ರತಿಭಟನಾ ಮೆರವಣಿಗೆ

ಅ.ಶ. ಸುದ್ದಿ ಗದಗ

ಗದಗ: ಶಾಸಕ ಎಚ್.ಕೆ. ಪಾಟೀಲ ಅವರಿಗೆ ಸಚಿವ ಸ್ಥಾನ ನೀಡುವಂತೆ ಆಗ್ರಹಿಸಿ ವಿವಿಧ ಸಂಘಟನೆಗಳು ಹಾಗೂ ಅವರ ಅಭಿಮಾನಿಗಳು ನಗರದಲ್ಲಿ ಮಂಗಳವಾರ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಸಾವಿರಾರು ಸಂಖ್ಯೆಯಲ್ಲಿ ಸೇರಿದ್ದ ಪ್ರತಿಭಟನಕಾರರು ಎಚ್. ಕೆ.ಪಾಟೀಲ ಪರ ಘೋಷಣೆ ಕೂಗಿದರು. ಅವರಿಗೆ ಸಚಿವ ಸ್ಥಾನ ಕೊಡಲೇಬೇಕೆಂದು ಒತ್ತಾಯಿಸಿದರು. ಎತ್ತನಬಂಡಿ, ಟ್ರ್ಯಾಕ್ಟರ್ ಗಳಲ್ಲೂ ಜನರು ಪಾಲ್ಗೊಂಡರು. ಆಟೊರಿಕ್ಷಾದವರು ಪ್ರತಿಭಟನೆಯಲ್ಲಿ ಭಾಗವಹಿಸಿದರು.

ಅಪಾರ ಸಂಖ್ಯೆಯಲ್ಲಿ ಜನರು




ಸೇರಿದ್ದರಿಂದ ಪ್ರಮುಖ ರಸ್ತೆಗಳಲ್ಲಿ ಸಂಚಾರದಟ್ಟಣೆ ಉಂಟಾಯಿತು. ಜನರನ್ನು ನಿಯಂತ್ರಿಸಲು ಪೊಲೀಸರು ಹರಸಾಹಸಪಟ್ಟರು. ಮುಂಜಾಗ್ರತಾ ಕ್ರಮವಾಗಿ ವಿವಿಧೆಡೆ ಬ್ಯಾ–ರಿಕೇಡ್ ಅಳವಡಿಸಿ, ಬಿಗಿ ಬಂದೋಬಸ್ತ್ ಮಾಡಲಾಗಿತ್ತು.

## ಶಕ್ತಿ ಯೋಜನೆಯಡಿ ‘ಸ್ಮಾರ್ಟ್ ಕಾರ್ಡ್’ ವಿತರಣೆಗೆ ಅಂತಿಮ ಸಿದ್ಧತೆ–ಸಚಿವ ಬೈರತಿ ಸುರೇಶ್

ಅ.ಶ. ಸುದ್ದಿ ಬೆಂಗಳೂರು

ಬೆಂಗಳೂರು: ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಶಕ್ತಿ ಯೋಜನೆಯಡಿ ಸ್ಮಾರ್ಟ್ ಕಾರ್ಡ್ ವಿತರಣೆ ಬಗ್ಗೆ ಅಂತಿಮ ರೂಪುರೇಶೆ ಸಿದ್ಧಪಡಿಸಲಾಗುತ್ತಿದೆ ಎಂದು ಸಾರಿಗೆ ಸಚಿವ ಬೈರತಿ ಸುರೇಶ್ ತಿಳಿಸಿದ್ದಾರೆ.

ಸೋಮವಾರ ವಿಧಾನಸೌಧದಲ್ಲಿ ಸಾರಿಗೆ ಇಲಾಖೆಯ ಉನ್ನತಾಧಿಕಾ–ರಿಗಳೊಂದಿಗೆ ಸಭೆ ನಡೆಸಿದ ಅವರು, ಸುಮಾರು 2 ಕೋಟಿಗೂ ಅಧಿಕ ಮಹಿಳೆಯರ ಉಚಿತ ಪ್ರಯಾಣಕ್ಕೆ ಸ್ಮಾರ್ಟ್ ಕಾರ್ಡ್ ವಿತರಿಸುವ ಸಾಧ್ಯತೆಗಳಿವೆ. ಈ ಸ್ಮಾರ್ಟ್ ಕಾರ್ಡ್ ವಿತರಣೆಗೆ ಸಂಬಂಧಿಸಿದಂತೆ ವಿಶೇಷ ಉದ್ದೇಶಿತ ವಾಹನ (SPV) ಯನ್ನು ರಚನೆ ಮಾಡಿ, ಇದರಡಿಯೇ ವಿತರಣಾ ಪ್ರಕ್ರಿಯೆ ನಡೆಸಲಾಗುತ್ತದೆ ಎಂದರು.

ಇದೇವೇಳೆ, ಸ್ಮಾರ್ಟ್ ಕಾರ್ಡ್



ನ ರೂಪುರೇಶೆಯನ್ನು ಅಂತಿಮಗೊಳಿಸಲು ವಹಿವಾಟು ಸಲಹೆಗಾರರ ಸಮಿತಿಯನ್ನು ನೇಮಕ ಮಾಡಲಾಗಿದೆ. ಈ ಸಮಿತಿಯು ಸ್ಮಾರ್ಟ್ ಕಾರ್ಡ್ ಸ್ವರೂಪ, ತಾಂತ್ರಿಕ ನೆರವು, ಟೆಂಡರ್ ಪ್ರಕ್ರಿಯೆ ಮತ್ತು ವಿತರಣೆ ಪ್ರಕ್ರಿಯೆಯನ್ನು ಹೇಗೆ ನಡೆಸಬೇಕೆಂಬುದರ ಬಗ್ಗೆ ಸಾರಿಗೆ ನಿಗಮಗಳಿಗೆ ಸಲಹೆ, ಮಾರ್ಗದರ್ಶನ ನೀಡಲಿದೆ ಎಂದು ತಿಳಿಸಿದರು.

# ಟಾಟಾ ವಿದ್ಯುತ್ ಪವರ್ ಖಾಸಗೀಕರಣಕ್ಕೆ ಗದಗ ಹೆಸ್ಕಾಂ ಸಿಬ್ಬಂದಿಗಳ ಭಾರಿ ವಿರೋಧ

ಅ.ಶ. ಸುದ್ದಿ ಗದಗ

ಗದಗ: ರಾಜ್ಯದಲ್ಲಿ ಟಾಟಾ ವಿದ್ಯುತ್ ಪವರ್ ಕಂಪನಿಯ ಪರ್ಯಾಯ ವಿದ್ಯುತ್ ಪರವಾನಿಗೆಗೆ ಗದಗ ಜಿಲ್ಲೆಯಲ್ಲಿ ಭಾರಿ ವಿರೋಧ ವ್ಯಕ್ತವಾಗುತ್ತಿದೆ. ವಿದ್ಯುತ್ ಖಾಸಗಿಕರಣಕ್ಕೆ ಗದಗನಲ್ಲಿ ಹೆಸ್ಕಾಂ ನೌಕರರೆಲ್ಲರೂ ಭಾರೀ ವಿರೋಧ ವ್ಯಕ್ತಪಡಿಸಿದ್ದಾರೆ.

ನಗರದ ಮುಳಗುಂದ ನಾಕಾ ಬಳಿಯ ಜಿಲ್ಲಾ ಹೆಸ್ಕಾಂ ಕಚೇರಿ ಅಂಗಳದಲ್ಲಿ ಸೋಮವಾರ ಸಭೆ ನಡೆಸಿ ಟಾಟಾ ಪವರ್ ಕಂಪನಿ ವಿರುದ್ಧ ಧಿಕ್ಕಾರ ಕೂಗಿ ಅಕ್ರೋಶ ವ್ಯಕ್ತಪಡಿಸಿದ್ದಾರೆ. ಬೇಡವೇ ಬೇಡ ರಾಜ್ಯದಲ್ಲಿ ಟಾಟಾ ಪವರ್ ಕಂಪನಿ ಬೇಡ. ತೊಲಗಲಿ, ತೊಲಗಲಿ ಟಾಟಾ ಪವರ್ ಖಾಸಗಿ ಕಂಪನಿ ತೊಲಗಲಿ ಎಂದು ಘೋಷಣೆ ಕೂಗಿದರು. ಗದಗ ಹೆಸ್ಕಾಂ ಕಾರ್ಯನಿರ್ವಾಹಕ ಅಭಿಯಂತರರಾದ ರಾಜೇಶ್ ಕಲ್ಯಾಣಶೆಟ್ಟರ್ ನೇತೃತ್ವದಲ್ಲಿ ಸಭೆ ನಡೆಸಲಾಯಿತು. ಈ ಸಭೆಯಲ್ಲಿ ಹೆಸ್ಕಾಂ ನೌಕರರು, ಅನೇಕ ಸಂಘಟ–ಕರು, ವಿವಿಧ ಸಮಾಜದ ಮುಖಂಡರು, ಸಾರ್ವಜನಿಕರು ಪೂರ್ವಭಾವಿ ಸಭೆ ನಡೆಸಿದರು. ನಂತರ ಟಾಟಾ ಪವರ್ ಕಂಪನಿಯ ಪ್ರಸ್ತಾಪವನ್ನು ನಿರಾಕರಿಸಲು ಒತ್ತಾಯಿಸಿದರು.

ರಾಜ್ಯದಲ್ಲಿ 19 ಜಿಲ್ಲೆಗಳ ವಿದ್ಯುತ್ ವಿತರಣೆಗೆ ಖಾಸಗಿ ಕಂಪನಿ ಎಂಟ್ರಿಯಾಗ್ತಿದೆ. ಕರ್ನಾಟಕ ವಿದ್ಯುತ್ ಶಕ್ತಿ ನಿಯಂತ್ರಣ ಆಯೋಗದ ಎದುರು ಪ್ರಸ್ತಾಪ ಸಲ್ಲಿಸಿದೆ. ಜೂನ್ 23 ರ




ಒಳಗೆ ತಕರಾರು ಅರ್ಜಿಯನ್ನು ಪತ್ರದ ಮೂಲಕ ಸಲ್ಲಿಸಬಹುದು ಎಂದಿದ್ದಾರೆ. 5 ವಿಭಾಗದ ನೌಕರರು, ಸಾರ್ವಜನಿಕರು ವಿರೋಧ ಮಡಿದ್ರೆ ಅದು ಅಷ್ಟಕ್ಕೆ ನಿಲ್ಲುತ್ತೆ. ಇಲ್ಲವಾದ್ರೆ ವಿದ್ಯುತ್ ಖಾಸಗೀಕರಣವಾದರೆ ಹೆಸ್ಕಾಂ, ಬೆಸ್ಕಾಂ, ಜೆಸ್ಕಾಂ, ಚೆಸ್ಕಾಂ ಸೇರಿದಂತೆ 5 ವಿಭಾಗದ ಆದ–ಾಯಕ್ಕೆ ದೊಡ್ಡ ಹೊಡೆತ ಬಿಳ್ಳಲಿದೆ ಎಂದರು.

ಸುಮಾರು 60 ವರ್ಷದಿಂದ ನಾವು ವಿದ್ಯುತ್ ಪ್ರಸರಣ ಮಾಡುತ್ತಾ ಬಂದಿದ್ದೆವೆ. ಈಗ ಖಾಸಗಿ ಕಂಪನಿಯವರು ಮೊದಲು 19 ಜಿಲ್ಲೆಯನ್ನು ವಶಕ್ಕೆ ಪಡೆದು ಮುಂದೆ ಕರ್ನಾಟಕ ಎಲ್ಲಾ ಜಿಲ್ಲೆಗಳನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳುವ ಸಾಧ್ಯತೆ ಇದೆ. ವಿದ್ಯುತ್ ಪ್ರಸರಣದ 5 ವಿಭಾಗಕ್ಕೂ ಇದು ಮರಣ ಶಾಸನವಿದ್ದಂತೆ. ಮುಂದೆ ನಾವೆಲ್ಲಾ ಅವರ ಗುಲಾಮರಂತೆ ಕೆಲಸ ಮಾಡಬೇಕಾಗುತ್ತದೆ. ಕೆಇಬಿ ನೌಕರರ ಹಿತಾಸಕ್ತಿಗೆ ವಿರೋಧಿ ಪ್ರಸ್ತಾಪ ಕೈ ಬಿಡುವಂತೆ ಆಗ್ರಹಿಸಿದರು. ವಿದ್ಯುತ್ ಖಾಸಗಿ ಕಂಪನಿಗೆ ಮನ್ನಣೆ ನೀಡಬಾರದು. ಸಾಕಷ್ಟು ವಿರೋಧದ ನಡುವೆಯೂ ವಿದ್ಯುತ್ ಖಾಸಗಿಕರಣಕ್ಕೆ ಮುಂದಾದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಮಾಡುವುದಾಗಿ ಸರ್ಕಾರಕ್ಕೆ ಹೆಸ್ಕಾಂ ನೌಕರರು ಎಚ್ಚರಿಕೆ ನೀಡಿದರು.

ಈ ವೇಳೆ ಗದಗ ಜಿಲ್ಲೆಯ ಹೆಸ್ಕಾಂ ಅಧಿಕಾರಿಗಳು, ಗುತ್ತಿಗೆ ಸಂಘದ ಹೋರಾಟ ಸಮಿತಿ ಉಪಾಧ್ಯಕ್ಷರಾದ ರವಿ ಜೋಗಿನ್, ಮಲ್ಲಪ್ಪ ಕಿಂದರಿ, ಪ್ರಕಾಶ್ ಅಂಗಡಿ, ಜಮೀರ್ ಮಟ್ಟಿ, ಎಸ್.ಎನ್ ಬಳ್ಳಾರಿ, ಎಲ್.ಡಿ ಚಂದಾವರಿ, ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಗುಡಿಮನಿ, ಬಿ.ಆರ್ ಕಲಾಲ, ಕೃಷ್ಣಾ ಹೆಬಸೂರ, ಪ್ರವೀಣ ದ್ಯಾನಪ್ಪನವರ್, ಮೋಶಿ ಉಮಚಗಿ, ಸಂತೋಷ ಪೂಜಾರ್, ಬಸವರಾಜ ಸಾಬಳೆ, ನಾಗರಾಜ ಕುರಿ ಸೇರಿದಂತೆ ಅನೇಕ ಸಂಘಟಿಕರು, ಸಾರ್ವಜನಿಕರು ಉಪಸ್ಥಿತರಿದ್ದರು.

# ಯಾರ ಬಗ್ಗೆಯೂ ಅಪಪ್ರಚಾರ ಮಾಡುತ್ತಿಲ್ಲ : ಈರಪ್ಪ ಕುಡಗುಂಟಿ ಸ್ಪಷ್ಟನೆ

ಅ.ಶ. ಸುದ್ದಿ ಕುಕನೂರು

**ಕುಕನೂರು: ಕೆಪಿಸಿಸಿ ಅಧ್ಯಕ್ಷ ಬಿ.ಕೆ ಹರಿಪ್ರಸಾದ ಅವರನ್ನು ಭೇಟಿಯಾಗಿ ಕೇವಲ ಶುಭಾಶಯ ಕೋರಿದ್ದಕ್ಕೆ, ಕುಕನೂರು ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಹನುಮಂತಗೌಡ ಚೆಂಡೂರ ಹಾಗೂ ಕೆ-ರಿಬಸಪ್ಪ ನಿಡುಗುಂದಿಯವರ ಇಲ್ಲ, ಸಲ್ಲದ ಆರೋಪ ಮಾಡುತ್ತಿರುವುದು ಸರಿಯಲ್ಲ ಎಂದು ಮಾಜಿ ಜಿಲ್ಲಾ ಪಂಚಾಯತಿ ಸದಸ್ಯ ಹಾಗೂ ಕಾಂಗ್ರೇಸ್ ಮುಖಂಡ ಈರಪ್ಪ ಕುಡುಗುಂಟಿ ತಿರುಗೇಟು ನೀಡಿದ್ದಾರೆ.**

ಪಟ್ಟಣದ ನೀರಿಕ್ಷಣಾ ಮಂದಿರದಲ್ಲಿ ಕರೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾವು 2023ರಲ್ಲಿ ಬಿಜೆಪಿ ಬಿಟ್ಟು, ಡಿ.ಕೆ ಶಿವಕುಮಾರ ನೇತೃತ್ವದಲ್ಲಿ ನಾನು ಹಾಗೂ ಚನ್ನಬಸಪ್ಪನವರು ಕಾಂಗ್ರೆಸ್ ಸೆರ್ಪಡೆಗೊಂಡ



ನಂತರ ಶಾಸಕ ರಾಯರಡ್ಡಿಯವರು ಅಧಿಕೃತವಾಗಿ ಯಲಬುರ್ಗಾ ಕಾಂಗ್ರೆಸ್ ಪಾರ್ಟಿ ಕಚೇರಿಯಲ್ಲಿ ಪಾರ್ಟಿ ಸೆರ್ಪಡೆ ಮಾಡಿಕೊಂಡಿದ್ದರು. ಆದರೆ ಇಲ್ಲಿಯವರೆಗೆ ಶಾಸಕ ರಾಯರಡ್ಡಿವಯವರು ಏನು ಮಾತಾಡಿಲ್ಲ, ಆದರೆ, ಕೆಪಿಸಿಸಿ ಅಧ್ಯಕ್ಷರ ಭೇಟಿ ಹಾಗೂ ನಮ್ಮ ಸಮಾಜ ಸೇವೆಯನ್ನು ನೋಡಿದ ಕುಕನೂರು ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಹನುಮಂತಗೌಡ ಚಂಡೂರ ಹಾಗೂ ಕೆರಿಬಸಪ್ಪ ನಿಡಗುಂದಿಯವರಿಗೆ ಸಹನೆಯಾಗುತ್ತಿಲ್ಲ, ಆದ್ದರಿಂದ ಇಲ್ಲ ಸಲ್ಲದ ಆರೋಪ ಮಾಡುತ್ತಿದ್ದಾರೆ ಎಂದರು.

ನಾವು ಕಾಂಗ್ರೆಸ್ ಪಕ್ಷಕ್ಕೆ ಈ ಹಿಂದೆ ಸಾಕಷ್ಟು ಶ್ರಮವಹಿಸಿ ಕೆಲಸ ಮಾಡಿದ್ದೇವೆ, ರಾಯರಡ್ಡಿಯವರು ಚುನಾವಣೆಗೆ ಸ್ಪರ್ಧಿಸಿದಾಗ ರಾಯರಡ್ಡಿಯವರ ಹಿಂದೆ ಖರ್ಚಿ ಹಾಕಿಕೊಂಡು ಕುಳಿತು ಫೋಜ್ ನೀಡದೇ ಕ್ಷೇತ್ರದ 144 ಹಳ್ಳಿಗಳಲ್ಲಿ ಮನೆ, ಮನೆಗೆ ತೆರಳಿ ಮತ ಯಾಚನೆ ಮಾಡಿದ್ದೇವೆ ಎಂದು ಪರೋಕ್ಷವಾಗಿ ಟಾಂಗ್ ನೀಡಿದರು. ನಾವು ಎಂದಿಗೂ ಪಕ್ಷ ವಿರೋಧಿ ಕೆಲಸಗಳನ್ನು ಮಾಡಿಲ್ಲಾ, ಪಕ್ಷ ಬಳಸಿಕೊಂಡು ನಾವು ಯಾವುದೇ ಸ್ವಂತ ವ್ಯವಹಾರ ನಡೆಸಿ ಲಾಭ ಪಡೆದಿಲ್ಲಾ ಎನ್ನುವ ಬಗ್ಗೆ ಹಗುರವಾಗಿ ಮಾತನಾಡುವವರು ತಿಳಿದುಕೊಂಡು ಮಾತನಾಡಬೇಕು ಎಂದರು.

ನಂತರ ಕಳಕಪ್ಪ ಕಂಬಳಿ ಮಾತನಾಡಿ ಈರಪ್ಪ ಕುಡುಗುಂಟಿಯವರು ನಮ್ಮ ಬಾಲ್ಯ ಸ್ನೇಹಿತರಾಗಿದ್ದು, ಅವರು ಕಾಂಗ್ರೆಸ್ ಪಕ್ಷಕ್ಕೆ ನನ್ನನ್ನು ಕರೆಯುತ್ತಿದ್ದಾರೆ ಆದರೆ ನಾನು ಪಕ್ಷ ಸೇರ್ಪಡೆಯಿಗಲು ಯೋಚನೆ ಮಾಡುತ್ತೇನೆ ಎಂದು ಹೇಳಿದ್ದೇನೆ. ನಾನು ಈಗ ಸಮಾಜ ಸೇವೆ ಮಾಡುತ್ತಿದ್ದೇನೆ, ಮುಂದೆಯು ಮಾಡುತ್ತೇನೆ ಆದರೆ ಚುನಾವಣೆಯ ಬಗ್ಗೆ ನಾನು ಈಗ ಏನು ಮಾತನಾಡುವುದಿಲ್ಲಾ ಎಂದು ಸ್ಪಷ್ಟವಾಗಿ ನುಡಿದರು. ತಾಲೂಕ ಪಂಚಾಯತಿ ಮಾಜಿ ಸದಸ್ಯ ಕಳಕಪ್ಪ ಕಂಬಳಿ, ತಾಪಂ ಮಾಜಿ ಸ್ಥಾಯಿ ಸಮಿತಿ ಅಧ್ಯಕ್ಷ ಫಕೀರಪ್ಪ ತಳವಾರ, ಮುಖಂಡರಾದ ನೀಲನಗೌಡ ಪೋಲಿಸ್ ಪಾಟೀಲ್, ಪ್ರಕಾಶ ಚಿನ್ನೂರ, ಈಮಾಮ್ ಸಾಬ ಮಂಡಲಗಿರಿ ಸೇರಿದಂತೆ ಇನ್ನಿತರರು ಇದ್ದರು.

1ನೇ ಪುಟದಿಂದ....

ದೇಶದ ಯುವಜನರಲ್ಲಿ ಸೇವಾ ಮನೋಭಾವ, ದೇಶಭಕ್ತಿ ಮತ್ತು ಉತ್ತಮ ವ್ಯಕ್ತಿತ್ವದ ಮೌಲ್ಯಗಳನ್ನು ಬೆಳೆಸಬೇಕಾದ ಅಗತ್ಯವಿದೆ ಎಂದು ಅವರು ಹೇಳಿದರು. ನಾವು ಯುವಜನರನ್ನು ಕಠಿಣ ಪರಿಶ್ರಮ ಮತ್ತು ಸೇವೆಯ ಮನೋಭಾವದಿಂದ ಪ್ರೇರೇಪಿಸಬೇಕು. ಭಾರತದ ಬಲವರ್ಧನೆಗಾಗಿ ಅವರಲ್ಲಿ ಆಶಯವನ್ನು ಜಾಗೃತಗೊಳಿಸಬೇಕು. ನಮ್ಮ ಬದುಕಿನ ಮೂಲಕವೇ ಅವ-ರಿಗೆ ದಾರಿದೀಪವಾಗಬೇಕು, ಎಂದು ಹೇಳಿದರು. ಪರಿಸರ ಹಾನಿ ಮತ್ತು ಅತಿಯಾದ ಉಪಭೋಗದಂತಹ ಜಾಗತಿಕ ಸಮಸ್ಯೆಗಳಿಗೆ ಭಾರತದಲ್ಲಿ ಪರಿಹಾರದ ವಿಚಾರಗಳಿವೆ ಎಂದು ಭಾಗವತ್ ಅಭಿಪ್ರಾಯಪಟ್ಟರು.ಭೂಮಿಯು ಮಾನವಕುಲವನ್ನು ಉಳಿಸಬಲ್ಲದು. ಆದರೆ ದುರಾಸೆ ಅಸಮತೋಲನವನ್ನು ಉಂಟುಮಾಡುತ್ತದೆ. ಅಮೆರಿಕದ ಜೀವನಮಟ್ಟವನ್ನು ಅತ್ಯುತ್ತಮವೆಂದು ಪರಿಗಣಿಸಲಾಗುತ್ತದೆ. ಆದರೆ 142 ಕೋಟಿ ಭಾರತೀಯರು ಅದೇ ಮಟ್ಟದಲ್ಲಿ ಸಂಪನ್ಮೂಲಗಳನ್ನು ಬಳಸಿದರೆ ಒಂದು ಭೂಮಿ ಸಾಕಾಗುವುದಿಲ್ಲ; ಆರು ಭೂಮಿಗಳು ಬೇಕಾಗುತ್ತವೆ, ಎಂದು ಅವರು ಎಚ್ಚರಿಸಿದರು. ಇತರ ರಾಷ್ಟ್ರಗಳನ್ನು ಕುರುಡಾಗಿ ಅನುಕರಿಸಬಾರದು ಎಂದು ಹೇಳಿದ ಅವರು, ಭಾರತವು ಮಹಾಶಕ್ತಿಯಾಗಿ ಬೆಳೆದ ಬಳಿಕ ಅಮೆರಿಕ ಅಥವಾ ಇತರ ಬಲಿಷ್ಠ ರಾಷ್ಟ್ರಗಳಂತೆ ವರ್ತಿಸಿದರೆ ಅದು ಭಾರತವಾಗಿರುವುದಿಲ್ಲ. ಭಾರತ ಶಕ್ತಿಯುತವಾದಾಗ ವಿಶ್ವದಲ್ಲಿ ಶಾಂತಿ ಮತ್ತು ಸೌಹಾರ್ದ ಹೆಚ್ಚಾಗಬೇಕು, ಎಂದರು. ಭಾರತ ಮತ್ತು ಅಮೆರಿಕದ ಸಂಬಂಧದ ಬಗ್ಗೆ ನಡೆದ ಸಂಭಾಷಣೆಯನ್ನು ಉಲ್ಲೇಖಿಸಿದ ಅವರು, ಒಬ್ಬ ವಿದೇಶಿ ವ್ಯಕ್ತಿ ಭಾರತ ಮತ್ತು ಅಮೆರಿಕ ಸಹಜ ಮಿತ್ರರಾಗಬಹುದು ಎಂದರು. ಆರ್ಥಿಕ ಹಾಗೂ ರಕ್ಷಣಾ ಸಹಕಾರವೂ ಸಾಧ್ಯ ಎಂದರು. ಆದರೆ ಪ್ರತೀ ಬಾರಿ ಅವರು ಅಮೆರಿಕದ ಹಿತಾಸಕ್ತಿಗಳನ್ನು ಕಾಪಾಡುವ ಷರತ್ತು ವಿಧಿಸುತ್ತಿದ್ದರು ಎಂದು ಹೇಳಿದರು. ನೆರೆಯ ರಾಷ್ಟ್ರಗಳೊಂದಿಗೆ ಭಾರತದ ಸಂಬಂಧವು ಸ್ವಾರ್ಥದ ಮೇಲೆ ಅಲ್ಲ, ಕರ್ತವ್ಯ ಮತ್ತು ಮಾನವೀಯತೆಯ ಮೇಲೆ ಆಧಾರಿತವಾಗಿದೆ ಎಂದು ಅವರು ತಿಳಿಸಿದರು.ಮಾಲ್ಡೀವ್?ಸನಲ್ಲಿ ಕುಡಿಯುವ ನೀರಿನ ಬಿಕ್ಕಟ್ಟು ಎದುರಾದಾಗ ನೆರವಾದದ್ದು ಭಾರತವೇ ಹೊರತು ಚೀನಾ ಅಲ್ಲ. ಶ್ರೀಲಂಕಾ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದಾಗ ಸಹಾಯಕ್ಕೆ ಧಾವಿಸಿದ ದೇಶವೂ ಭಾರತವೇ, ಎಂದು ಹೇಳಿದರು. ನಾವು ಇನ್ನೂ ದೊಡ್ಡ ಮಟ್ಟದ ನೆರವು ನೀಡುವಷ್ಟು ಶ್ರೀಮಂತರಾಗಿಲ್ಲ. ಆದರೂ ನೆರೆಯ ರಾಷ್ಟ್ರ ಸಂಕಷ್ಟದಲ್ಲಿದ್ದರೆ ಸಹಾಯ ಮಾಡುವುದನ್ನು ಲೆಕ್ಕಾಚಾರ ಮಾಡುವುದಿಲ್ಲ. ಅದು ನಮ್ಮ ಸ್ವಭಾವ, ನಮ್ಮ ಧರ್ಮ, ಎಂದು ಅವರು ಹೇಳಿದರು.ವಿಶ್ವ ಎದುರಿಸುತ್ತಿರುವ ಅನೇಕ ಸಮಸ್ಯೆಗಳಿಗೆ ಭಾರತದ ನಾಗರಿಕತೆಯ ಜ್ಞಾನದಲ್ಲಿ ಪರಿಹಾರ ಅಡಗಿದೆ ಎಂದು ಅವರು ಅಭಿಪ್ರಾಯಪಟ್ಟರು. ಕೆಲವು ಸಮಸ್ಯೆಗಳಿಗೆ ಬೇರೆ ದೇಶಗಳು ಪರಿಹಾರ ಕಂಡುಕೊಂಡಿವೆ. ಆದರೆ ಕೆಲವು ಅಪೂರ್ಣ ಕಾರ್ಯಗಳನ್ನು ಪೂರ್ಣಗೊಳಿಸುವ ಸಾಮರ್ಥ್ಯ ಭಾರತಕ್ಕಷ್ಟೇ ಇದೆ, ಎಂದು ಹೇಳಿದರು. ಸಂಪತ್ತು ಮತ್ತು ಅವಕಾಶಗಳು ಕೆಲವರ ಕೈಯಲ್ಲಿ ಕೇಂದ್ರೀಕೃತವಾಗದೆ ಸಮಾನವಾಗಿ ಹಂಚಿಕೆಯಾಗಬೇಕು ಎಂದು ಕರೆ ನೀಡಿದ ಅವರು, ಶ್ರಮಕ್ಕೆ ಗೌರವ ನೀಡುವ ಸಂಸ್ಕೃತಿ ಬೆಳೆಸಬೇಕೆಂದು ಒತ್ತಾಯಿಸಿದರು. ಕಠಿಣ ಪರಿಶ್ರಮಕ್ಕೆ ಗೌರವ ಸಿಗಬೇಕು. ಶ್ರಮಕ್ಕೆ ಘನತೆ ದೊರಕಬೇಕು. ಪ್ರಾಮಾಣಿಕ ದುಡಿಮೆಗೆ ಮಾನ್ಯತೆ ಇರಬೇಕು. ಮುಂದಿನ ಪೀಳಿಗೆಗೆ ದುಡಿಯುವುದು ಹೆಮ್ಮೆಯ ವಿಷಯ ಎಂಬುದನ್ನು ಕಲಿಸಬೇಕು. ಶ್ರಮಕ್ಕೆ ಗೌರವ ನೀಡದೇ 140 ಕೋಟಿ ಜನರ ರಾಷ್ಟ್ರ ಸಮೃದ್ಧಿಯಾಗಲು ಸಾಧ್ಯವಿಲ್ಲ, ಎಂದು ಹೇಳಿದರು. ನೈತಿಕವಾಗಿ ಸಂಪತ್ತು ಸೃಷ್ಟಿಸುವುದು ಹಾಗೂ ಆದ-ಾಯವನ್ನು ಜವಾಬ್ದಾರಿಯಿಂದ ಬಳಸುವ ಅಗತ್ಯವನ್ನೂ ಅವರು ಒತ್ತಿಹೇಳಿದರು.ರಾಷ್ಟ್ರ ಪುನರ್‌ನಿರ್ಮಾಣದ ಕಾರ್ಯವನ್ನು ಯಾವುದೇ ಒಂದು ಸಂಘಟನೆ, ರಾಜಕೀಯ ಪಕ್ಷ ಅಥವಾ ವ್ಯಕ್ತಿ ಒಬ್ಬನೇ ಸಾಧಿಸಲು ಸಾಧ್ಯವಿಲ್ಲ. ಸಮೃದ್ಧ, ನೈತಿಕ ಹಾಗೂ ಪರಿಸರ ಸ್ನೇಹಿ ಭಾರತ ನಿರ್ಮಾಣಕ್ಕೆ ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಬೇಕು, ಎಂದು ಭಾಗವತ್ ಕರೆ ನೀಡಿದರು.

# ಕೃತಕ ಕಾಲು ಜೋಡಣೆ ಶಿಬಿರ ಉದ್ಘಾಟನೆ

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಎಂಎಸ್‌ಪಿಎಲ್ ಲಿಮಿಟೆಡ್ ಹಾಗೂ ಭಗವಾನ ಮಹಾವೀರ್ ವಿಕ್ಲಾಗ್ ಸಹಾಯತ ಸಮಿತಿ, ಜೈಪುರ ಇವರ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಲಾದ 13ನೇ ವರ್ಷದ ಕೃತಕ ಕಾಲು ಜೋಡಣೆ ಶಿಬಿರದ ಉದ್ಘಾಟನಾ ಕಾರ್ಯಕ್ರಮ ಮಂಗಳವಾರ ನಗರದ ಮುಸ್ಲಿಂ ಶಾದಿ ಮಹಲ್‌ನಲ್ಲಿ, ನಗರಸಭೆ ಎದುರುಗಡೆ ನಡೆಯಿತು.**

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಉಪ ವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ, ಕಳೆದ 13 ವರ್ಷಗಳಿಂದ ಸಂಸ್ಥೆಯು ನಿರಂತರವಾಗಿ ವಿಕಲಚೇತನರ ಸೇವೆಯಲ್ಲಿ ತೊಡಗಿಸಿಕೊಂಡಿದ್ದು, ಹೊಸಪೇಟೆಯಲ್ಲಿ 10 ಹಾಗೂ ಕೊಪ್ಪಳದಲ್ಲಿ 2 ಶಿಬಿರಗಳನ್ನು ಯಶಸ್ವಿಯಾಗಿ ನಡೆಸಲಾಗಿದೆ ಎಂದು ತಿಳಿಸಿದರು. ಇದುವರೆಗೆ ಒಟ್ಟು 2,836 ಫಲಾನುಭವಿಗಳು ಈ ಶಿಬಿರಗಳ ಪ್ರಯೋಜನ ಪಡೆದುಕೊಂಡಿದ್ದಾರೆ ಎಂದು ಹೇಳಿದರು.




ಕೊಪ್ಪಳ ಹಾಗೂ ಸುತ್ತಮುತ್ತಲಿನ ಪ್ರದೇಶಗಳ ವಿಕಲಚೇತನರು ಈ ಶಿಬಿರದ ಸದುಪಯೋಗ ಪಡೆದುಕೊಳ್ಳಬೇಕು ಎಂದು ಕರೆ ನೀಡಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಡಿವೈಎಸ್‌ಪಿ ಹೇಮಂತ್ ಕುಮಾರ್ ಮಾತನಾಡಿ, ಈ ಶಿಬಿರದಲ್ಲಿ ಮಾನವೀಯತೆಯ ನಿಜವಾದ ಮೌಲ್ಯ ಕಾಣುತ್ತಿದೆ. ಆರೋಗ್ಯ ಸಮಸ್ಯೆಗಳು ಎದುರಾದಾಗ ವ್ಯಕ್ತಿ ಮಾನಸಿಕವಾಗಿ ಕುಗ್ಗುವ ಸಾಧ್ಯತೆ ಇರುತ್ತದೆ. ಆದರೆ ಇಂತಹ ಸೇವಾ ಕಾರ್ಯಕ್ರಮಗಳು ಅವರಿಗೆ ಹೊಸ ಆತ್ಮವಿಶ್ವಾಸ ತುಂಬುತ್ತವೆ. ಬಲ್ಡೋಟಾ ಸಂಸ್ಥೆ ಇಂತಹ ಶಿಬಿರಗಳನ್ನು ಇನ್ನಷ್ಟು ವ್ಯಾಪಕವಾಗಿ ಆಯೋಜಿಸಬೇಕು, ಎಂದು ಅಭಿಪ್ರಾಯಪಟ್ಟರು.

ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ವೆಂಕಟೇಶ್ ಮಾತನಾಡಿ, ವಿಕಲಚೇತನರು ಸಮಾಜದಲ್ಲಿ ಎಲ್ಲರಂತೆ ಬದುಕುವ ಕನಸು ಹೊಂದಿರುತ್ತಾರೆ. ಭಗವಂತ ಅವರುಗಳಿಗೆ ವಿಶೇಷ ಸಾಮರ್ಥ್ಯವನ್ನು ನೀಡಿರುತ್ತಾನೆ. ಆದ್ದರಿಂದ ಯಾವುದೇ ಕಾರಣ-ಕ್ಕೂ ಧೈರ್ಯ ಕಳೆದುಕೊಳ್ಳದೆ ಸಮಾಜದ ಮುಖ್ಯವಾಹಿನಿಯಲ್ಲಿ ಆತ್ಮವಿಶ್ವಾಸದಿಂದ ಬದುಕಬೇಕು, ಎಂದು ಸಲಹೆ ನೀಡಿದರು. ಭಗವಾನ್ ಮಹಾವೀರ್ ವಿಕಲಾಂಗ ಸಹಾಯತಾ ಸಮಿತಿಯ ಪ್ರತಿನಿಧಿ ನರೇಂದ್ರ ಕುಮಾರ್ ಮಾತನಾಡಿ, ಜೈಪುರ ಫುಟ್ ಶಿಬಿರವನ್ನು ನಮ್ಮ ಸಂಸ್ಥೆ ಕಳೆದ 13 ವರ್ಷಗಳಿಂದ ನಿರಂತರವಾಗಿ ನಡೆಸಿಕೊಂಡು ಬರುತ್ತಿದೆ. ಕೊಪ್ಪಳದಲ್ಲಿಯೂ ಇದೇ ಅವಧಿಯಲ್ಲಿ ಜನರ ಉತ್ತಮ ಸಹಕಾರದೊಂದಿಗೆ ಶಿಬಿರಗಳನ್ನು ಯಶಸ್ವಿಯಾಗಿ ಆಯೋಜಿಸಲಾಗಿದೆ. ನಮ್ಮ ಸೇವಾ ಕಾರ್ಯಕ್ಕೆ ರಾಷ್ಟ್ರೀಯ ಮಟ್ಟದಲ್ಲಿ ಪ್ರತಿಷ್ಠಿತ ಪ್ರಶಸ್ತಿಗಳೂ ಲಭಿಸಿವೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಎಂಎಸ್‌ಪಿಎಲ್ ಹಾಗೂ ಬಲ್ಡೋಟಾ ಸಮೂಹದ ಅಧಿಕಾರಿಗಳು, ವಿವಿಧ ಇಲಾಖೆಗಳ ಪ್ರತಿನಿಧಿಗಳು, ಗಣ್ಯರು ಹಾಗೂ ವಿಕಲಚೇತನ ಫಲಾನುಭವಿಗಳು ಉಪಸ್ಥಿತರಿದ್ದರು.

# ಭೀಮಾಂಭಿಕ ಮಠದಲ್ಲಿ 387ನೇ ಶಿವಾನುಭವ ಗೋಷ್ಠಿ

## ಬದುಕಿಗೆ ಬೆಳಕನ್ನು ಕರುಣಿಸುವರು ಗುರುಗಳಾಗುತ್ತಾರೆ; ಕೆ.ಎಸ್.ಛತ್ರದ




ಅ.ಶ. ಸುದ್ದಿ ಯಲಬುರ್ಗಾ

**ಯಲಬುರ್ಗಾ: ಜೀವನದಲ್ಲಿ ಉನ್ನತ ಗುರಿ ಸಾಧನೆಮಾಡಲು ಗುರು ಬೇಕು, ನಮ್ಮ ಬದುಕಿನ ಬಾಳಿಗೆ ಯಾರು ಬೆಳಕನ್ನು ನೀಡುತ್ತಾರೆ ಅವರೆ ನಿಜವಾದ ಗುರು ಎಂದು ನಿವೃತ್ತ ಪ್ರಾಂಶುಪಾಲ ಕೆ.ಎಚ್.ಛತ್ರದ ಹೇಳಿದರು.**

ಅವರು ತಾಲೂಕಿನ ಸುಕ್ಷೇತ್ರ ದಮ್ಮೂರ ಗ್ರಾಮದ ಶ್ರೀ ಭೀಮಾಂಬಿಕಾದೇವಿ ಮಠದಲ್ಲಿ ಜೂನ್ 14 ರಂದು ಅಧಿಕ ಅಮವಾಸ್ಯೆ ಚತುರ್ದಶಿ ನಿಮಿತ್ತವಾಗಿ 387 ನೇ ಶಿವಾನುಭವ ಗೋಷ್ಠಿಯಲ್ಲಿ ಚಿಂತನ ವಿಷಯ ಗುರುಭ್ಯೋ ನಮಃ ವಿಷಯ ಕು-ರಿತು ಮಾತನಾಡಿದ ಅವರು ಶ್ರೀ ಗುರುಭ್ಯೋ ನಮಃ ಎಂದರೆ ಗುರುಗಳಿಗೆ ನಮಸ್ಕಾರ ಸಲ್ಲಿಸುವದು ಎಂದರ್ಥ ಮತ್ತು ಜ್ಞಾನ ನೀಡುವ ಗುರುವಿಗೆ ಭಕ್ತಿ ಪೂರ್ವಕ ವಂದನೆಗಳು ಎಂದು ಅರ್ಥ ಎಂದು ವಿವರಿಸಿದರು. ಪ್ರತಿಯೊಬ್ಬ ಪಾಲಕರು ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡುವದರ ಜೊತೆಗೆ ಅವರಿಗೆ ಒಳ್ಳೆಯ ನಡತೆಯ ಗುಣಗಳ ಸಂಸ್ಕಾರ ಸಂಸ್ಕೃತಿ ನಿಡುವಲ್ಲಿ ಪಾಲಕರು ಶ್ರಮಿಸಬೇಕು ಎಂದು ವಕೀಲರ ಸಂಘದ ಕಾರ್ಯದರ್ಶಿ ಮಹಾಂತೇಶ ಬೂದಗುಂಪ ಅವರು ತಿಳಿಸಿದರು.

ವಿದ್ಯೆ ಇದು ಜ್ಞಾನದ ಸಂಪತ್ತು ,ಯಾರು ಕದಿಯಲಾರದೆ ಆಸ್ತಿ ಅದುವೇ ವಿದ್ಯೆ ಸಂಪತ್ತು,ನಾವು ಗಳಿಸಿದ ಆಸ್ತಿ ಅಂತಸ್ತು ಸಂಪತ್ತು ಹಂಚಿಕೆ ಮಾಡಬಹುದು ಆದ-'ರೆ ನಮ್ಮಲಿರುವ ವಿದ್ಯೆಯನ್ನು ಪಾಲು ಮಾಡುವದಕ್ಕೆ ಬರುವದಿಲ್ಲ ಆದ್ದರಿಂದ ಜ್ಞಾನಕ್ಕೆ ಮಹತ್ವ ಕೊಡಬೇಕು ಎಂದು ಶ್ರೀ ಭೀಮಾಂಭಿಕಾದೇವಿ ಶಿವಾನುಭವ ಸೇವಾ ಸಮಿತಿ ಅದ್ಯಕ್ಷ ಶರಣಬಸಪ್ಪ ದಾನಕೈ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿದರು. ಪ್ರಾಸ್ತಾವಿಕವಾಗಿ ಗುರುಮೂರ್ತಿ ಬಡಿಗೇರ ಮಾತನಾಡಿದರು.

ಕಾರ್ಯಕ್ರಮದಲ್ಲಿ ಮಠದ ಒಡೆಯರಾದ ಹನುಮಂತಪ್ಪಜ್ಜ ಧರ್ಮರಮಠ, ಹಾಗೂ ಶರಣಯ್ಯ ಹಿರೇಮಠ ಸಾನಿಧ್ಯ ವಹಿಸಿದ್ದರು. ಕಾರ್ಯಕ್ರಮದಲ್ಲಿ ಸಂಗೀತ ಬಳಗದ ಕಳಕಪ್ಪ ಹಡಪದ, ಯಮನೂರಪ್ಪ ಹಳ್ಳಿಕೇರಿ, ಭಟಪನಹಳ್ಳಿಯ ದೇವಪ್ಪ ಮಾಸ್ತರ ಗುರಿಕಾರ ಸಂಗೀತ ಸೇವೆ ನೀಡಿದರು. ಈ ವೇಳೆ ಬಾಲಪ್ಪ ಜರಕುಂಟಿ, ಬಾಬುಸಾಬ ಕುಷ್ಟಗಿ,ರಮೇಶ ಚಿಕ್ಕಗೌಡ್ರ, ಯಮನೂರಪ್ಪ ಕುಡಗುಂಟಿ, ಫಕೀರಸಾಬ ಗುಮಗೇರಿ, ಭೀಮಣ್ಣ ಜರಕುಂಟಿ, ರಂಗಪ್ಪ ಪಮ್ಮಾರ, ಭೀಮಪ್ಪ ಚಿಕ್ಕಗೌಡ್ರ ಸೇರಿದಂತೆ ಇತರರು ಇದ್ದರು.

# ಶಿಕ್ಷಣದಿಂದ ಮಕ್ಕಳ 'ಉಜ್ವಲ' ಭವಿಷ್ಯ : ಜಗದೀಶ ಎಂ

ಅ.ಶ. ಸುದ್ದಿ ಯಲಬುರ್ಗಾ

**ಯಲಬುರ್ಗಾ: ಯಾವುದೇ ಮಗು ಶಾಲೆಯಿಂದ ಹೊರಗೂಳಿಯದಂತೆ ಕಡ್ಡಾಯವಾಗಿ ಶಾಲೆಗೆ ದಾಖಲಾತಿ ಮಾಡಿಸಬೇಕು ಎಂದು ಬಿಆರ್ ಸಿ ಯ ಸಮನ್ವಯಧಿಕಾರಿ ಜಗದೀಶಪ್ಪ ಎಂ. ಹೇಳಿದರು. ಅವರು ತಾಲ್ಲೂಕಿನ ಕನಕೊಪ್ಪ ಸರಕಾರಿ ಮಾಧ್ಯಮಿಕ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳ ವಿಶೇಷ ದಾಖಲಾತಿ ಆಂದೋಲನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿ ಶಿಕ್ಷಣವು ಮಗುವಿನ ಭವಿಷ್ಯ ಉಜ್ವಲ ಗೊಳಿಸುತ್ತದೆ. ಶಿಕ್ಷಣವಿಲ್ಲದೆ ಬದುಕು ಕಟ್ಟಿಕೊಳ್ಳುವುದು ಕಷ್ಟ ಸಾಧ್ಯ. ಆದ್ದರಿಂದ ಆಸ್ತಿ ಮಾಡುವುದಕ್ಕಿಂತ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವ ಮೂಲಕ ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡುವಂತೆ ಪಾಲಕರಿಗೆ ತಿಳಿಸಿದರು.**

ನಂತರ ಶಾಲೆಯ ಮುಖ್ಯ ಶಿಕ್ಷಕ



ಶರಣಪ್ಪ ತುಮರಿಕೊಪ್ಪ ಅವರು ಶಿಕ್ಷಣದ ಮಹತ್ವದ ಕುರಿತು ಮಾತನಾಡಿ ಪ್ರತಿನಿತ್ಯ ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಪಾಲಕರಲ್ಲಿ ವಿನಂತಿ ಮಾಡಿದರು. ಕಾರ್ಯಕ್ರದಲ್ಲಿ ಮನು ನೀಲಪ್ಪ ಗದ್ದಿ, ಸಾನ್ವಿ ಸುಬ್ಬಣ್ಣವರ ಈ ಮಕ್ಕಳ ದಾಖಲಾತಿ ನಮೂನೆ ಭರ್ತಿ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕಾರ್ಯಕ್ರಮ ವೇದಿಕೆಯಲ್ಲಿ ಉಮೇಶ ಮೇಲಸಕ್ರಿ ಬಿ ಆರ್ ಪಿ ಕುಷ್ಟಗಿ ಮತ್ತು ಶರಣಪ್ಪ ಉಪ್ಪಾರ ಸಿ ಆರ್ ಪಿ ಯವರು ಉಪಸ್ಥಿತರಿದ್ದರು. ಕಾರ್ಯಕ್ರಮಕ್ಕೂ ಮುನ್ನ ಗ್ರಾಮದ ಪ್ರಮುಖ ರಸ್ತೆಗಳ ಮೂಲಕ ಮಕ್ಕಳಿಂದ ಪ್ರಭಾತ್ ಪೇ-ರಿಯೊಂದಿಗೆ ಟಾಟಾ ಏಸ್ ವಾಹನ ಕ್ಕೆ ಶೈಕ್ಷಣಿಕ ಸಂದೇಶ ಸಾರುವ ಘೋಷ ವಾಕ್ಯಗಳ ಬ್ಯಾನರ್ ಗಳನ್ನು ಎರಡು ಬದಿ ಅಂಟಿಸಿ ರಿಬ್ಬನ್, ಬಲೂನ್, ಬಣ್ಣದ ಹಾಳೆಗಳನ್ನು ಅಂಟಿಸಿ ತೆಂಗಿನಗರಿ ತಳಿರು ತೋರಣಗಳನ್ನು ಕಟ್ಟಿ ನೆರವೇರಿಸಲಾಯಿತು.

ಆಂದೋಲನ ಕಾರ್ಯಕ್ರಮದ ಅಂಗವಾಗಿ ಶಾಲೆಯಲ್ಲಿ ಮಕ್ಕಳಿಗೆ ಭಾರತಾಂಬೆ, ಗಾಂಧೀಜಿ, ಡಾಕ್ಟರ್ ಅಂಬೇಡ್ಕರ್, ಜವಹರಲಾಲ್ ನೆಹರು, ಸಂಗೊಳ್ಳಿ ರಾಯಣ್ಣ, ಸ್ವಾಮಿ ವಿವೇಕಾನಂದ, ಒನಕೆ ಓಬವ್ವ ವೇಷಭೂಷಣ ಮಾಡಿಸಿ ಕಾರ್ಯಕ್ರಮದಲ್ಲಿ ಮೆರುಗು ಮೂಡಿಸಲಾಗಿತ್ತು. ಶಿಕ್ಷಣದ ಅರಿವು ಮೂಡಿಸಲು ಶೈಕ್ಷಣಿಕ ಸಂದೇಶ ಸಾರುವಂತಹ ಘೋಷ ವಾಕ್ಯಗಳ ಫಲಕಗಳನ್ನು ಬಳಸಿಕೊಂಡು ಮತ್ತು ಇವುಗಳನ್ನು ಮಕ್ಕಳಿಂದ ಗಟ್ಟಿ ಮನೆಯಲ್ಲಿ ಹೇಳಿಸಲಾಯಿತು. ಮಕ್ಕಳಿಂದ ಶಿಕ್ಷಣಕ್ಕೆ ಪೂರಕವಾದ ಕೋಲಾಟ ಮತ್ತು ನೃತ್ಯಗಳನ್ನು ಜನ ಬಿಡ ಬೀದಿಗಳಲ್ಲಿ ಮಾಡಿಸಲಾಯಿತು. ಕಾರ್ಯಕ್ರಮದಲ್ಲಿ ಗ್ರಾಮದ ಶಿಕ್ಷಣ ಪ್ರೇಮಿಗಳು ಹಾಗೂ ಹಿರಿಯರಾದ ಹಾಲೇಶ್ ಗದ್ದಿ, ಮಲ್ಲಪ್ಪ ಗುಡಿಹೋಲ. ಫಕೀರ್ ಗೌಡ ಗೌಡ್ರು, ರೇಣುಕರಾಜ ಸುಬ್ಬಣ್ಣವರು, ಮಲ್ಲಪ್ಪ ಗುಡಿ ಹೊಲ, ಮಾಬು ಸಾಬ್ ಭಾವಖಾನ, ಸುರೇಶ್ ಮೂರುಗುಂಡಿ, ಸಂತೋಷ ಇಟಗಿ , ಶಿವನಗೌಡ ಸುಬ್ಬಣ್ಣವರ, ಪ್ರಕಾಶ ಬಿಂಗಿ, ಶಾಂತಮ್ಮ ಗೌಡ್ರು ಟಾಟಾ ಟ್ರಸ್ಟ್ ಬಸವರಾಜ ನಾಗಣ್ಣವರ ಮತ್ತು ಲಕ್ಷ್ಮಿಕಾಂತ ಪಾಲ್ಗೊಂಡಿದ್ದರು. ಶಾಲಾ ಶಿಕ್ಷಕ ಶಿಕ್ಷಕಿ ಸಿಬ್ಬಂದಿ ನಿಕಟ ಪೂರ್ವ ಮುಖ್ಯ ಶಿಕ್ಷಕ ಹಣಮಪ್ಪ, ಸಿ. ಎಂ ಬಸವರಾಜ, ವ್ಯಾಪಾರಿ, ಪಾಂಡುರಂಗ,ಅನಿಲ್ ರಾಜೇಶ್ವರಿ,ಹಣಮಂತ ಆಡಿನ, ಬಸವಸರಾಜ ಎಂ ಸೇರಿದಂತೆ ಇತರರು ಇದ್ದರು.

# ಲೇಖಕರ ದಿನಚರಿ...

# ನಾ ಮಾಡಿದ್ದು ತಪ್ಪಾ...? (ನೈಜ ಘಟನೆ)

ಅಮ್ಮ ನಿನ್ನ ಬ್ಯಾಗಲ್ಲಿ ಮೊಬೈಲ್ ರಿಂಗ್ ಆಗ್ತಿದೆ ನೋಡು ಯಾರು ಅಂತ. ಇರೋ! ಪ್ರತೀಕ ಈ ಬಸ್ಸು ರಶ್ ಬೇರೆ ಎಲ್ಲಾ ಲಗೇಜ್ ಬ್ಯಾಗ್ ಗಳು ನನ್ನ ಮೇಲೆ ಇವೆ ಇರು ತಗೇದೆ ಎನ್ನುತಾ ತನ್ನ ವ್ಯಾನಿಟಿ ಬ್ಯಾಗ್ ನಿಂದ ರೂಪ ಮೊಬೈಲ್ ತೆಗೆದು ಹಲೋ ಶಾಂತಕ್ಕ ಸಿಟಿ ಬಸ್ಸಲ್ಲಿ ಇದ್ದೀವಿ. ಇನ್ನೇನು ಮಂಜುನಾಥ ನಗರ ನೆಕ್ಸ್ಟ್ ಸ್ಟಾಪ್ ಇಳಿತಿವಿ, ಎನ್ನತ್ತಲೇ ವಿಜಯ (ರೂಪಾಳ ಗಂಡ )ಎಲ್ಲರೂ ಬನ್ನಿ ನಮ್ಮ ಸ್ಟಾಪ್ ಬಂತು ಬೇಗ ಬೇಗ ಬ್ಯಾಗ ತಗೊಂಡು ಇಳಿಯಿರಿ ಎಂದನು.

ಅವಸರವಸರವಾಗಿ ಪ್ರತೀಕ, ರೂಪ, ಹಾಗೂ ವಿಜಯ್ ಲಗೇಜ್ ಎತ್ತಿಕೊಂಡು ಬಸ್ಸಿನಿಂದ ಇಳಿದು ಮದುವೆ ನಡೆಯುವ ಮನೆಯತ್ತ ಹೊರಟರು. ಅಮ್ಮ ನೋಡು ! ಈ ನಮ್ಮ ಧಾರವಾಡವೆಂದರೆ, ದಕ್ಷಿಣ ಕಾಶಿ ಇದ್ದಂಗೆ ಬೇರೆ ಊರು, ಜಿಲ್ಲೆ , ಅಷ್ಟೇ ಯಾಕೆ ಬೇರೆ ರಾಜ್ಯದಿಂದಲೂ ಇಲ್ಲಿ ಶಿಕ್ಷಣ ಪಡೆಯಲು ಸಾಕಷ್ಟು ವಿದ್ಯಾರ್ಥಿಗಳು ಬರುತ್ತಾರೆ. ಎಲ್ಲಿ ನೋಡಿದರಲ್ಲಿ ಗಿಳಿವಿಂಡಿನ ತರಹ ವಿದ್ಯಾರ್ಥಿಗಳ ಗುಂಪು. ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಲು ಹಗಲು ರಾತ್ರಿಯನ್ನದೆ ತಪಸ್ಸಿನ ತರಹ ಓದುತ್ತಾರೆ ಎಂದನು ಪ್ರತೀಕ. ಹೌದು ಕಣೋ ನಮ್ಮ ಉತ್ತರ ಕರ್ನಾಟಕ ಭಾಗದ ವಿದ್ಯಾರ್ಥಿಗಳಿಗೆ ಈ ಊರು ಅಂದರೆ ಪಂಚಪ್ರಾಣ.

ಇಲ್ಲಿಯ ಪರಿಸರ, ಶಿಕ್ಷಣ, ಇಲ್ಲಿಯ ಸಂಸ್ಕೃತಿ ವಿದ್ಯಾರ್ಥಿಗಳು ಯಾವತ್ತೂ ತಮ್ಮ ಜೀವನದಲ್ಲಿ ಮರೆಯಲು ಸಾಧ್ಯವಿಲ್ಲ, ಎನ್ನುತ್ತಾ ತಂದೆ ತಾಯಿ ಹಾಗೂ ಮಗ ಮಾತನಾಡುತ್ತಾ ಧಾರವಾಡದ ತಂಪಾದ ರಸ್ತೆಯಲ್ಲಿ ಮುನ್ನಡೆಯುತ್ತ ಸಾಗಿದರು. ಅಷ್ಟರಲ್ಲಿ ಮದುವೆ ಮನೆ ಬಂದೇಬಿಟ್ಟಿತು. ಒಳಗಿನಿಂದ ಓಡಿ ಬಂದ ಶಾಂತಕ್ಕ ಏನೇ ! ರೂಪ ನಿಂಗೆ ಎಷ್ಟು ಸಾರಿ ಫೋನ್ ಮಾಡೋದು ಎರಡು ಸಾರಿ ರಿಂಗ್ ಆಯ್ತು ನಂತರ ಸ್ವಿಚ್ ಆಫ್ ಆಯ್ತು ನಾವು ಬಸ್ ಸ್ಟಾಪ್ ಗೆ ಕಾರ್ ಕಳಿಸ್ತೀವಿ ಅಂತ ಹೇಳೋಣ ಅಂದ್ರೆ ನಿನ್ನ ಫೋನ್ ಚಾರ್ಜ್ ಇರಲಿಲ್ಲವೇನೋ ಸ್ವಿಚ್ ಆಫ್ ಆಗಿತ್ತು ಎಂದರು.

ರೂಪ ಹೌದಾ ನನ್ನ ಫೋನ್ ಚಾರ್ಜ್ ಫುಲ್ ಇತ್ತಲ್ಲ, ಎನ್ನುತ್ತಲೇ ತನ್ನ ವ್ಯಾನಿಟಿ ಬ್ಯಾಗ್ ಅನ್ನು ತಡಕಾಡಿದಳು ಮೊಬೈಲ್ ಕಾಣಲಿಲ್ಲ, ಇನ್ನೊಂದು ಸಾರಿ ಜಾಗೃತವಾಗಿ ಬ್ಯಾಗನ್ನು ಹುಡುಕಿದಳು ಎಲ್ಲೂ ಸಿಗಲಿಲ್ಲ ಅಷ್ಟರಲ್ಲಿ ವಿಜಯ್ ತನ್ನ ಮೊಬೈಲ್ ನಿಂದ ರೂಪಾಳ ಮೊಬೈಲ್ಗೆ ಕಾಲ್ ಮಾಡಿದರು ಅವಳ ಫೋನ್ ಸ್ವಿಚ್ ಆಫ್ ಆಗಿತ್ತು. ಗಾಬರಿಯಿಂದ ಅಯ್ಯೋ ನನ್ನ ಫೋನ್ ಕಳೆದು ಹೋಯಿತು ಎಂದು ದುಃಖ ತಪ್ತಳಾದಳು ರೂಪಾ. ವಿಜಯ್ ಕೊಂಚ ಸಿಟ್ಟಿನಿಂದ ಮೊನ್ನೆ ತಾನೆ 26 ಸಾವಿರ ರೂಪಾಯಿ ಕೊಟ್ಟು ಮೊಬೈಲನ್ನು ತೆಗೆದುಕೊಟ್ಟಿದ್ದೆ ಹುಷಾರಾಗಿ ಇಟ್ಟುಕೊಳ್ಳಲು ಬರುವುದಿಲ್ಲವಾ ಎಂದು ಗದರಿದನು. ಅಷ್ಟರಲ್ಲಿ ಶಾಂತಕ್ಕ ಬೈಬೇಡ ಬಿಡಪ್ಪ ಯಾರಾದರೂ ಬೇಕು ಅಂತಲೇ ಕಳೆದುಕೊಳ್ಳುತ್ತಾರೆಯೇ ಏನೋ ಮರ್ಮೋಸ (ಕ್ಷಣ ಮರೆವು) ಆಗಿದೆ. ನನ್ನ ಮಗ ಕುಮಾರ ಪೊಲೀಸ ಅದಾನಲ್ಲ ಅವನಿಗೆ ಹೇಳು ಮೊನ್ನೆ ಇದೇ ಓಣಿಯಲ್ಲಿ 10 ಮೊಬೈಲ್ ಗಳು ಕಳ್ಳತನವಾಗಿದ್ದವು ,ಅವುಗಳನ್ನೆಲ್ಲಾ ಹುಡುಕಿಕೊಟ್ಟಿದ್ದಾನೆ.ಅವನಿಗೆ ಹೇಳೋಣ ಬರ್ರಿ ಗಾಬರಿಯಾಗಬೇಡಿ,- ಎಂದು ಅವರನ್ನು ಒಳಗೆ ಕರೆದಳು.

ಅಷ್ಟರಲ್ಲಿ ಕುಮಾರ ಒಳಗೆನಿಂದ ಬಂದು ಏನಕ್ಕ ಇವಾಗ ಬಂದ್ರಾ ಎಲ್ಲಾ ಕ್ಷೇಮಾನಾ? ಎಂದು ಕೇಳಿದ.ರೂಪ ಸಪ್ಪೆ ಮುಖದಿಂದ ಹೂಂ ಕಣೋ ಚನ್ನಾಗಿದ್ದೀವಿ,ನೀ ಹೇಗಿದ್ದೀಯಾ,ನಿನ್ನ ಡ್ಯೂಟಿ ಹೇಗಿದೆ? ಎಂದು ಕೇಳಿದಳು. ಪ್ರತೀಕ ಗಾಬರಿಯಿಂದ ಮಾಮಾ ಅಮ್ಮನ ಫೋನು ಬಸ್ಸಿನಲ್ಲಿ ಬರುವಾಗ ಕಳೆದು ಹೋಗಿದೆ ಎಂದನು. ಹೌದಾ ಅದರ ಐಎಂಇಐ ನಂಬರ ಗೊತ್ತಿದ್ದರೆ ಹೇಳು ಈಗಲೇ ಟೆಲಿಕಾಂ ಆಫೀಸ್ಗೆ ಕಂಪ್ಲೇಂಟ್ ಮಾಡ್ತೀನಿ ಎಂದನು.ಪ್ರತೀಕ ನಂಬರ ಹೇಳಿದ ಆ ಕ್ಷಣದಿಂದಲೇ ಕುಮಾರ ಮೊಬೈಲ್ ಟ್ರ್ಯಾಕ್ ಮಾಡಲು ಪ್ರಾರಂಭಿಸಿದನು.

ಸುಮಾರು ಐದು ಗಂಟೆಯ ನಂತರ ರೂಪಾಳ ಮೊಬೈಲ್ ಸ್ವಿಚ್ ಆನ್ ಆಯ್ತು . ಪೊಲೀಸರು ಆ ನಂಬರನ್ನು ಟ್ರ್ಯಾಕ್ ಮಾಡಲು ಪ್ರಾರಂಭಿಸಿದರು ಅದು ನೇರವಾಗಿ ಧಾರವಾಡದ ಮುರುಘಾಮಠದ



ಲೊಕೇಶನ್ ತೋರಿಸಿತು, ತಕ್ಷಣವೇ ಆ ಮಠಕ್ಕೆ ಕುಮಾರ್ ಹಾಗೂ ಅವನ ಟೀಮ್ ಹೋಯಿತು. ಮಠದ ಉಸ್ತುವಾರಿ ಅಧಿಕಾರಿಗಳಿಗೆ ವಿಷಯ ತಿಳಿಸಿ ಎಲ್ಲಾ ಮಕ್ಕಳನ್ನು ಪರೀಕ್ಷಿಸಲು ಮುಂದಾದರು. ಈ ವಿಷಯ ಮಠದ ತುಂಬೆಲ್ಲ ಹರಡಿತು. ಅಷ್ಟರಲ್ಲೇ ಬಿ ಎಸ್ಸಿ ಓದುತ್ತಿದ್ದ ಸತೀಶ್ ಎಂಬ ಹುಡುಗ ಅಳುತ್ತಲೇ ಓಡಿ ಬಂದು ತನ್ನದು ತಪ್ಪಾಯಿತು ನಾನೇ ಮೊಬೈಲನ್ನು ಕದ್ದು ತಂದೆ ಕ್ಷಮಿಸಿ ಎಂದು ಕುಮಾರನ ಕಾಲು ಹಿಡಿದನು.

ಕುಮಾರನು ಏನಪ್ಪಾ ಓದೋಕೆ ಅಂತ ಬಂದು ಕಳ್ಳನ ಮಾಡಲು ಶುರು ಮಾಡಿದ್ದೀಯಾ ಇಂತಹ ಪುಣ್ಯ ಸ್ಥಳದಲ್ಲಿ ಇದ್ದುಕೊಂಡು ಕದಿಯುವ ಕೆಲಸ ಮಾಡ್ತಿಯಲ್ಲ ನಾಚಿಕೆ ಆಗಲ್ವಾ ಎಂದು ಒಂದು ಕಪಾಳಕ್ಕೆ ಹೊಡೆದನು. ಅಷ್ಟರಲ್ಲಿ ರೂಪ ಹೊಡಿಬೇಡ ಬಿಡೋ ಹೋಗ್ಲಿ ಎಂದು ತಡೆದಳು. ಇಲ್ಲ ಅಕ್ಕ ಇವರಿಗೆ ಹೀಗೆ ಬಾರಿಸಬೇಕು , ಇವರನ್ನ ಹೀಗೆ ಬಿಟ್ರೆ ಮುಂದೇ ದೊಡ್ಡ ಕಳ್ಳರು ಆಗ್ತಾರೆ. ಓದೋಕೆ ಅಂತ ಬರೋದು ಸಿಟಿ ಲೈಫ್ ಎಂಜಾಯ್ ಮಾಡ್ಲಿಕ್ಕೆ ದುಡ್ಡಿಲ್ದೆ ಕಳ್ತನಕ್ಕೆ ಇಳಿತಾರೆ ಎಂದನು ಕುಮಾರ .ಅಷ್ಟರಲ್ಲೇ ಸತೀಶ ಅಳುತ್ತಾ ಮೇಡಂ ಕ್ಷಮಿಸಿ ನಾನು ಅಂತವನಲ್ಲ ನೀವು ಅವಸರದಲ್ಲಿ ಬಸ್ ಅನ್ನು ಇಳಿಯುವಾಗ ನಿಮ್ಮ ಮೊಬೈಲ್ ಕೆಳಗೆ ಬಿತ್ತು, ನಾನು ಅದನ್ನು ಹಿಡಿದುಕೊಂಡು ನಿಮ್ಮನ್ನು ಕೂಗಿದೆ ಆದರೇ ನೀವು ತಿರುಗಿ ನೋಡಲಿಲ್ಲ ಬೇಗನೆ ಇಳಿದು ಹೋದಿರಿ , ನಿಮ್ಮ ಮೊಬೈಲನ್ನು ನೋಡಿ ನಿಮಗೆ ಓಡಿ ಬಂದು ಹಿಂದಿರುಗಿಸೋಣ ಎಂದುಕೊಂಡೆ ಆದರೆ ನನ್ನ ಬಡತನ ನನ್ನನ್ನು ತಡೆಯಿತು. ನಾನು ಇಲ್ಲೇ ಪಕ್ಕದ ಅಮ್ಮೀನ ಬಾವಿ ಊರಿನ ಹುಡುಗ ನನ್ನ ಅಪ್ಪ ತೀರಿ ಹೋಗಿದ್ದಾರೆ, ನಮ್ಮ ತಾಯಿ ಕೂಲಿ ನಾಲಿ ಮಾಡಿ ಮೂರು ಮಕ್ಕಳನ್ನು ಓದಿಸುತ್ತಿದ್ದಾರೆ. ಅದರಲ್ಲಿ ನಾನೇ ದೊಡ್ಡವನು ಕಷ್ಟಪಟ್ಟು ಪಿಯುಸಿ ವರೆಗೆ ಓದಿ ಡಿಗ್ರಿ ಓದಲು ಧಾರವಾಡಕ್ಕೆ ಬಂದಿರುವೆ ತುಂಬಾ ಕಷ್ಟದಲ್ಲಿದ್ದೀನಿ ಮೇಡಂ ಪುಸ್ತಕಗಳನ್ನು ಕೊಳ್ಳಲು ನನ್ನ ಹತ್ತಿರ ದುಡ್ಡು ಇಲ್ಲ ಅವ-ರಿವರ ಪುಸ್ತಕವನ್ನು ಕೇಳಿ ಪಡೆದು ಓದುತ್ತಾ ಇದ್ದೇನೆ. ಆದ-'ರೆ ಈಗಿನ ತಂತ್ರಜ್ಞಾನ ಯುಗದಲ್ಲಿ ಮೊಬೈಲ್ ನನಗೆ ತುಂಬಾ ಅವಶ್ಯಕ, ದಿನಾಲು ಬೇರೆಯವರ (ಗೆಳೆಯರ) ಮೊಬೈಲನ್ನು ಇಸಿದುಕೊಂಡು ಓದುವಾಗ ಅವರ ಕೊಂಕುಮಾತು, ಅವರ ಅಣಕು ನೋಟ ನನ್ನನ್ನು ಕುಗ್ಗಿಸುತ್ತಿತ್ತು.

ದೇವರೇ ನನ್ನನ್ನು ಯಾಕೆ ಬಡವರ ಹೊಟ್ಟೆಯಲ್ಲಿ ಹುಟ್ಟಿಸಿದ್ದೀಯ ಎಂದು ದಿನಾಲೂ ದೇವರನ್ನು ಶಪಿಸುತಿದ್ದೆ. ಅಂತದರಲ್ಲಿ ನಿಮ್ಮ ಮೊಬೈಲ್ ಸಿಕ್ಕಿದ್ದು ಆ ದೇವರು ಕರುಣಿಸಿದ ವರವೆಂದು ತಿಳಿದುಕೊಂಡೆ , ನನ್ನ ಓದಿಗಾಗಿ ಹತ್ತಿರವೇ ಇಟ್ಟುಕೊಳ್ಳಲು ಮುಂದಾದೆ ಅಷ್ಟೇ, ಯಾವ ದುರುದ್ದೇಶದಿಂದ ನಿಮ್ಮ ಮೊಬೈಲನ್ನು ಕದ್ದಿಲ್ಲ ಮೇಡಂ, ನಂದೇನು ತಪ್ಪಿಲ್ಲ ಕ್ಷಮಿಸಿ ಎಂದು ಗೋಳಾಡಿದನು. ಅಲ್ಲಿ ನೆರೆದಿದ್ದ ಅವನ ಗೆಳೆಯರು ಕೂಡ ಹೌದು ಮೇಡಂ ಸತೀಶ ತುಂಬಾ ಒಳ್ಳೆಯ ಹುಡುಗ, ಮುಗ್ಧ, ದಯವಿಟ್ಟು ಅವನಿಗೆ ಏನು ಮಾಡಬೇಡಿ ಎಂದರು.ಆ ಪರಸ್ಥಿತಿಯನ್ನು ಕಂಡಾಗ ಅಲ್ಲಿದ್ದ ಎಲ್ಲರಿಗೂ ಕಣ್ಣಾಲೆಗಳು ತುಂಬಿದ್ದವು. ನಮ್ಮ ಮುಂದೆ ಇರುವ ಇಂತಹ ನೂರಾರು ನತದೃಷ್ಟ ವಿದ್ಯಾರ್ಥಿಗಳನ್ನು ನೋಡಿದಾಗ ಮನಸ್ಸು ಮಮ್ಮಲ ಮರಗುವುದಂತೂ ನಿಜ ಎಂದು ರೂಪ ಆ ಮೊಬೈಲನ್ನು ಮರಳಿ ಅವನ ಕೈಗೆ ಇಟ್ಟಳು, ಈ ಮೊಬೈಲ್ ನನಗಿಂತ ನಿನ್ನ ಹತ್ತಿರ ಇರುವುದೇ ಒಳ್ಳೆಯದು ಎಂದಳು.

ಆಗ ಸತೀಶ ಬೇಡ ಮೇಡಂ ಒಮ್ಮೆ ತಪ್ಪು ಮಾಡಿರುವೆ,ಇನ್ನೆಂದೂ ಇನ್ನೊಬ್ಬರ ವಸ್ತುವನ್ನು ಮುಟ್ಟಲಾರೇ, ಬೇಡ ಮೇಡಂ ! ನನಗೆ ಬೇಡ ! ಎಂದು ಮರಳಿ ಕೊಡಲು ಪ್ರಯತ್ನಿಸಿದ. ವಿಜಯ್ ಹಾಗೂ ಕುಮಾರನು ಕೂಡ ಇರಲಿ ನಿನ್ನ ಉದ್ದೇಶ ಒಳ್ಳೆಯದಾಗಿತ್ತು ನೀನು ಕದ್ದಿರುವುದು ವಿದ್ಯೆಗಾಗಿಯೇ ವಿನಹ ಮೋಜಿ ಗಾಗಿ ಅಲ್ಲ ಎಂದು ಒತ್ತಾಯ ಪೂರಕವಾಗಿ ಅವನಿಗೆ ಮೊಬೈಲನ್ನು ಕೊಟ್ಟರು. ಅಲ್ಲದೆ ಅವನ ಓದಿಗಾಗಿ ಸ್ವಲ್ಪ ದುಡ್ಡನ್ನು ಕೂಡ ವಿಜಯ್ ಅವನ ಕೈಗೆತ್ತನು ಅಷ್ಟರಲ್ಲೇ ಶರಣಾಗಿದ್ದ ಸತೀಶ ಅವರೆಲ್ಲರನ್ನು ತುಂಬು ಹೃದಯದಿಂದ ನಮಸ್ಕರಿಸಿ ಕಣ್ಣೀರು ಹಾಕ ತೊಡಗಿದ.

ಇರಲಿ ಯಾವುದಕ್ಕೂ ಯೋಚಿಸಬೇಡ ನಿನಗೆ ಏನಾದರೂ ಕಷ್ಟವಿದ್ದರೆ ನನ್ನ ನಂಬರ್ಗೆ ಫೋನ್ ಮಾಡು ನಾನು ನಿನಗೆ ಸಹಾಯ ಮಾಡುತ್ತೇನೆ ಎಂದು ಕುಮಾರ ತನ್ನ ಮೊಬೈಲ್ ನಂಬರನ್ನು ಕೊಟ್ಟು ಬೆನ್ನನ್ನು ತಟ್ಟಿದ. ಮುಂದೆ ಒಳ್ಳೆಯ ಓದನ್ನು ಓದಿ ಉತ್ತಮ ಪ್ರಜೆಯಾಗು ಎಂದು ಅಲ್ಲಿ ಇದ್ದವರೆಲ್ಲರೂ ಹರಸಿ ಮುಂದೆ ಸಾಗಿದರು. ಕೃತಜ್ಞನಾದ ಸತೀಶನು ಅವರೆಲ್ಲರನ್ನು ಮರೆಯಾಗುವವರೆಗೂ ಕಣ್ಣೀರಿನ ಧಾರೆಯೊಂದಿಗೆ ಬೀಳ್ಕೊಟ್ಟು ಮೊಬೈಲನ್ನು ಜೇಬಿಗಿಳಿಸಿದನು.



ಅಶ್ವಿನಿ ಅಂಗಡಿ ಬಾದಾಮಿ...

# ಬೇಸರದ ಕ್ಷಣಗಳು...



ನೀ ಬಳಿ ಇಲ್ಲದಾಗ  
ಬೇಸರದ ಕ್ಷಣಗಳು ಇನಿಯಾ..  
ನಿನ್ನೊಂದಿಗೆ ಕಳೆದ ಗಳಿಗೆಗಳು ನೆನಪಾಗಿ  
ಚುಚ್ಚುತ್ತವೆ ಮುಳ್ಳುಗಳಾಗಿ  
ಕಾಡುತ್ತವೆ ಹಟಮಾರಿ  
ಮಗುವಿನಂತೆ...

ನೆನಪುಗಳೇ ಹಾಗೆ  
ರಮಿಸುತ್ತವೆ ಒಮ್ಮೊಮ್ಮೆ  
ತಲೆನೇವರಿಸುತ್ತ  
ಮನದೊಳಗಿಳಿದು  
ತಡಕಾಡುತ್ತವೆ...

ನೆನಪುಗಳೇ ಹಾಗೆ. ಮರುಕಳಿಸಿ ಕಳವಳಿಸಿ  
ತಳಮಳಿಸುತ್ತವೆ...  
ನವುರಾಗಿ ಮೃದುವಾಗಿ  
ನವಿಲುಗರಿಯಂತೆ  
ಸ್ಪರ್ಷಿಸುತ್ತವೆ...

ನೀನಿಲ್ಲದೆ ಇರಿಯುತ್ತವೆ  
ಬೇಸರದ ಈ ಕ್ಷಣಗಳು  
ನೆನಪುಗಳ ಚೂರಿಯಿಂದ...




ಹಮೀದಾಬೇಗಂ ದೇಸಾಯಿ.ಸಂಕೇಶ್ವರ.

# ಗೋ'ಧೂಳಿ' ಪ್ರಕೃತಿಯಲ್ಲಿ ವಿಶಿಷ್ಟ ಆಚರಣೆ

**"ಸೂರ್ಯನು ತನ್ನ ಕಾಯಕವನ್ನು ಮುಗಿಸಿ, ನೀಲಿ ಕಡಲಿನ ಮಡಿಲಲ್ಲಿ ಮರೆಯಾಗುತ್ತಾ ಆಕಾಶದ ತುಂಬಾ ಬಣ್ಣಗಳನ್ನು ಚೆಲ್ಲುವ ಸುಂದರ ಸಮಯವೇ ಗೋಧೂಳಿ." ಹಗಲು ರಾತ್ರಿಯು ಸಂದಿಸುವ ಈ ಸುಂದರ ಸಮಯಕ್ಕೆ ಸಂಧ್ಯಾಕಾಲ, ಪ್ರದೋಷ ಕಾಲ, ಸಂಧಿ ಬೆಳಗು, ಇಳಿಸಂಜೆ, ಅಮೃತಕಾಲ ಎಂಬ ನಾನಾ ಹೆಸರುಗಳಿಂದ ಕರೆಯುತ್ತಾರೆ. ಹಕ್ಕಿಗಳು ಕಳರವ ಮಾಡುತ್ತಾ ಮರಳಿ ತಮ್ಮ ಗೂಡಿಗೆ ಮರಳುವ ಈ ಸಮಯವು ಪವಿತ್ರವಾದ ಘಳಿಗೆಯಾಗಿದೆ.**

ಗೋಧೂಳಿ ಎಂಬ ಪದವು 'ಗೋ 'ಮತ್ತು 'ಧೂಳಿ' ಎಂಬ ಎರಡು ಪದಗಳಿಂದ ಬಂದಿದೆ. ಗೋ ಎಂದರೆ ಹಸು ಮತ್ತು ಧೂಳಿ ಎಂದರೆ ಧೂಳು. ಹಿಂದೆ ಹಳ್ಳಿಗಳಲ್ಲಿ ನೂರಾರು ಹಸುಗಳನ್ನು ಸಾಕುತ್ತಿದ್ದರು. ಮುಂಜಾನೆ ಮೇಯಲು ಬಿಟ್ಟ ಹಸುಗಳು ಸಂಜೆಯಾಗುತ್ತಲೇ ಊರಿಗೆ ಮರಳುವಾಗ ಅವುಗಳ ಕಾಲಿನಿಂದ ಎದ್ದೇಳುವ ಧೂಳು ಪೂರ್ತಿ ಊರನ್ನು ಆವ-ರಿಸುತ್ತಿದ್ದಂತೆ. ಇದರಿಂದಾಗಿ ಈ ಸಮಯವನ್ನು 'ಗೋಧೂಳಿ ಸಮಯ 'ಎಂದೇ ಕರೆಯಲಾಗಿದೆ. ಹಸುಗಳು ಎಂದ ಕ್ಷಣ ನೆನಪಾಗುವುದು ಶ್ರೀಕೃಷ್ಣ. ಗೋಪಾಲಕನಾದ ಕೃಷ್ಣನು ದಿನಪೂರ್ತಿ ಹಸುಗಳನ್ನು ಕಾಡಿನಲ್ಲಿ ಮೇಯಿಸಿ ಸಂಜೆ ಅವುಗಳ ಜೊತೆಗೆ ಬೃಂದಾವನಕ್ಕೆ ಮರಳುತ್ತಿದ್ದನಂತೆ.

ನೂರಾರು ಹಸುಗಳ ಕಾಲುಗಳಿಂದ ಏಳುತ್ತಿದ್ದ ಧೂಳು ಶ್ರೀ ಕೃಷ್ಣನ ನೀಲವರ್ಣ ದೇಹವನ್ನು ಮತ್ತು ಮುಡಿಯಲ್ಲಿರುವ ನವಿಲುಗರಿಯನ್ನು ಆವರಿಸಿ ಒಂದು ದಿವ್ಯ ಪ್ರಭೆಯನ್ನು ಸೃಷ್ಟಿಸುತ್ತಿತ್ತಂತೆ,ಇದನ್ನು ಕವಿಗಳು 'ಪವಿತ್ರ ರಜಸ್ಸು 'ಎಂದು ಕರೆದಿದ್ದಾರೆ. ಇದು ಸೂರ್ಯಾಸ್ತಕ್ಕೆ 24 ನಿಮಿಷಗಳ ಮೊದಲು ಮತ್ತು ಸೂರ್ಯಸ್ತದ ನಂತರ 24 ನಿಮಿಷಗಳ ಕಾಲ ಇರುವ ಒಂದು ಸಂಧಿಕಾಲ. ಇದಕ್ಕೆ ಇಂಗ್ಲಿಷ್ ನಲ್ಲಿ 'ಟ್ವಿಲೈಟ್ ' ಅಥವಾ 'ಗೋಲ್ಡನ್ ಅವರ್' ಎಂದು ಕರೆಯುತ್ತಾರೆ.



ಮದುವೆಯಂತಹ ಶುಭ ಕಾರ್ಯಗಳಿಗೆ ಮುಹೂರ್ತ ಸಿಗದೇ ಇದ್ದಗ,ಅಥವಾ ಜಾತಕದಲ್ಲಿ ದೋಷಗಳು ಕಂಡುಬಂದಲ್ಲಿ ಗೋಧೂಳಿ ಲಗ್ನವನ್ನು ಆಯ್ಕೆ ಮಾಡಿಕೊಳ್ಳಲಾಗುತ್ತದೆ.

ಈ ಸಮಯದಲ್ಲಿ ನೈಸರ್ಗಿಕವಾಗಿಯೇ ದೋಷಗಳು ಪರಿಹಾರವಾಗುತ್ತದೆ ಎಂಬ ನಂಬಿಕೆಯಿದೆ. ಇನ್ನು ಈ ಸಮಯದಲ್ಲಿ ಮನೆಯ ಅಂಗಳದಲ್ಲಿ ತುಳಸಿ ಕಟ್ಟೆಯ ಎದುರು ದೀಪವನ್ನು ಬೆಳಗಿಸುವುದರಿಂದ ಲಕ್ಷ್ಮಿಯು ಮನೆಯನ್ನು ಪ್ರವೇಶಿಸುತ್ತಾಳೆ ಎಂಬ ನಂಬಿಕೆಯು ಭಾರತೀಯರದ್ದಾಗಿದೆ. ಸೂರ್ಯ ಮತ್ತು ಚಂದ್ರರ ಶಕ್ತಿಯು ಸಮತೋಲನದಲ್ಲಿ ಇರುವ ಈ ಪವಿತ್ರ ಕಾಲದಲ್ಲಿ ಮಾಡುವ ಪ್ರಾರ್ಥನೆಗೆ ಅತಿ ಹೆಚ್ಚು ಶಕ್ತಿ ಇದೆ ಎಂದು ನಂಬಲಾಗಿದೆ. ವೈಜ್ಞಾನಿಕವಾಗಿಯೂ ಈ ಸಮಯವು ಕುತೂಹಲಕಾರಿಯಾಗಿದೆ. ಈ ಸಂಧ್ಯಾಕಾಲದಲ್ಲಿ ನಿಸರ್ಗದತ್ತವಾಗಿಯೇ ಪ್ರಾಣಿ, ಪಕ್ಷಿಗಳ ದೇಹದಲ್ಲಿರುವ 'ಬಯೋಲಾಜಿ-ಕಲ್ ಕ್ಲಾಕ್' ವಿಶ್ರಾಂತಿಯ ಸಂಕೇತವನ್ನು ನೀಡುತ್ತದೆಯಂತೆ. ಹೀಗಾಗಿಯೇ ಅವುಗಳು ಮನೆಗೆ ಅಥವಾ ಗೂಡಿಗೆ ಮರಳುತ್ತವೆ.

ಇನ್ನೂ, ದಿಗಂತದಲ್ಲಿ ಮುಳುಗುವ ಸೂರ್ಯನ ಕಿರಣಗಳು ಗಾಳಿಯಲ್ಲಿರುವ ಧೂಳಿನ ಕಣಗಳ ಮೇಲೆ ಬಿದ್ದು ಬೆಳಕು ಚದುರುತ್ತದೆ. ಇದರಿಂದಾಗಿ ಆಗಸವು ಕೇಸರಿ ಅಥವಾ ಕೆಂಪು ಬಣ್ಣಕ್ಕೆ ತಿರುಗುತ್ತದೆ. ಆದ-'ರೆ ಹಳ್ಳಿಗಳಲ್ಲಿ ಹಸುಗಳು ಎಬ್ಬಿಸುವ ಧೂಳು ಸಂಜೆಯ ಸೌಂದರ್ಯವನ್ನು ದುಪ್ಪಟ್ಟಾಗಿಸುತ್ತದೆ. ಆಧ್ಯಾತ್ಮಿಕವಾಗಿ ಈ ಸಂಧಿ ಕಾಲಕ್ಕೆ' ಶೂನ್ಯದ ಸ್ಥಿತಿ' ಎಂದು ಹೇಳಲಾಗುತ್ತದೆ. ಈ ಅಮೃತಕಾಲವನ್ನು ಸೂರ್ಯ ಚಂದ್ರರ ಮಿಲನದ ಸಮಯವೆಂದು ಪರಿಗಣಿಸಲಾಗಿದೆ. ಸೂರ್ಯನು ಉಷ್ಣತೆ, ಕಾರ್ಯ ತತ್ಪರದೆ ಮತ್ತು ಜಾಗೃತ ಅವಸ್ಥೆಯ ಸಂಕೇತ ವಾಗಿದ್ದಾನೆ. ಚಂದ್ರನು ತಂಪು,ವಿಶ್ರಾಂತಿ ಮತ್ತು ಸುಪ್ತಾವಸ್ಥೆಯ ಸಂಕೇತ. ಹೀಗಾಗಿಯೇ ಸಂಜೆ ಸೂರ್ಯ ಮುಳುಗಿ ಚಂದ್ರ ಉದಯಿಸುವ ಹೊತ್ತಿನಲ್ಲಿ ನಮ್ಮ ದೇಹದಲ್ಲಿನ ಚಕ್ರಗಳು ಸ್ಥಿತ್ಯಂತರ ಗೊಳ್ಳುತ್ತವೆ.

ನಮ್ಮ ಮನಸ್ಸು ಹೊರಗಿನ ಜಗತ್ತಿನ ಗದ್ದಲ,ಗೊಂದಲಗಳಿಂದ ಹೊರಬಂದು ಅಂತರಂಗದ ಕಡೆಗೆ ಮುಖ ಮಾಡುತ್ತದೆ. ನಮ್ಮ ಮೆದುಳಿನಲ್ಲಿ ಇರುವ 'ಪೀನಿಯಲ್ ಗ್ರಂಥಿ'ಯು ಬೆಳಕಿನ ಬದಲಾವಣೆಗೆ ತಕ್ಷಣ ಪ್ರತಿಕ್ರಿಯಿಸುತ್ತದೆ. ಹಗಲಿನ ಪ್ರಕಾಶವು ಕಡಿಮೆಯಾಗಿ ಸಂಜೆಯ ಮಂದಬೆಳಕು ಭೂಮಿಯನ್ನು ತಂಪಾಗಿಸುವಾಗ ನಮ್ಮ ಮೆದುಳು 'ಮೆಲಟೋನಿನ್'ಎಂಬ ಹಾರ್ಮೋನ್‌ಅನ್ನು ಸ್ರವಿಸಲು ಸಿದ್ಧವಾಗುತ್ತದೆ. ಇದು ಮನಸ್ಸಿನಲ್ಲಿ ಒಂದು ಶಾಂತಿಯ ಭಾವವನ್ನು ಉಂಟುಮಾಡುತ್ತದೆ. ಹೀಗಾಗಿಯೇ ಈ ಸಮಯದಲ್ಲಿ ಮಾಡುವ ಪ್ರಾರ್ಥನೆ ಹೆಚ್ಚು ಪ್ರಭಾವಶಾಲಿಯಾದದ್ದು ಎಂದು ಪರಿಗಣಿಸಲ್ಪಟ್ಟಿದೆ.

ಯೋಗಶಾಸ್ತ್ರದ ಪ್ರಕಾರವು ಈ ವೇಳೆ ಅತ್ಯಂತ ಮಹತ್ವದ್ದು ಎನಿಸುತ್ತದೆ. ಈ ಹೊತ್ತಿನಲ್ಲಿ ನಮ್ಮ ದೇಹದಲ್ಲಿರುವ ಇಡಾ ಮತ್ತು ಪಿಂಗಳ ಎಂಬ ಎರಡು ನಾಡಿಗಳು ಸಮತೋಲನಕ್ಕೆ ಬಂದು 'ಸುಷುಮ್ನಾ ನಾಡಿ' (ಮಧ್ಯದ ನಾಡಿ ) ಕಾರ್ಯ ಪ್ರವೃತವಾಗುತ್ತದೆ.

ಹಾಗಾಗಿ ಇದು ಧ್ಯಾನ ಮತ್ತು ಪ್ರಾರ್ಥನೆಗೆ ಸೂಕ್ತವಾದ ಸಮಯವಾಗಿದ್ದು ಮನಸ್ಸು ಏಕಾಗ್ರತೆ ಪಡೆಯಲು ಸಹಾಯ ಮಾಡುತ್ತದೆ. ಈ ಸಮಯದಲ್ಲಿ ಮಾತನಾಡುವುದಕ್ಕಿಂತ ಮೌನವಾಗಿರುವುದ-ರಿಂದ ಮನಸ್ಸು ಹೆಚ್ಚು ಶಕ್ತಿಯುತವಾಗುತ್ತದೆ.

ಆದರೆ ದುರಾದೃಷ್ಟವಶಾತ್ ಇಂದಿನ ಯಾಂತ್ರಿಕ ಬದುಕಿನಲ್ಲಿ ನಾವು ಈ ಅದ್ಭುತ ಕ್ಷಣಗಳನ್ನು ಕಳೆದುಕೊಳ್ಳುತ್ತಿದ್ದೇವೆ. ದಿನದ ಹದಿನೈದು ನಿಮಿಷಗ ಳನ್ನು ನಾವು ನಮಗಾಗಿ,ನಮ್ಮ ಮನಸ್ಸಿನ ಖುಷಿಗಾಗಿ, ಈ ಪ್ರಕೃತಿಯ ಜೊತೆಯಾಗಿ ಕಳೆಯದೇ ನಮಗೇ ನಾವೇ ನಷ್ಟವನ್ನು ಮಾಡಿಕೊಳ್ಳುತ್ತಿದ್ದೇವೆ . ದಿನದ ಅಷ್ಟು ಸಮಯವನ್ನು ಮೊಬೈಲ್, ಕಂಪ್ಯೂಟರ್,ಟಿವಿ ಮುಂತಾದ ಎಲೆಕ್ಟ್ರಾನಿಕ್ ಪರದೆಗಳ ಮೇಲೆಯೇ ನಮ್ಮ ಕಣ್ಣುಗಳನ್ನು ಇಟ್ಟು ಕಣ್ಣುಗಳ ಆಯಸ್ಸನ್ನು, ವರ್ಚಸ್ಸನ್ನು ಕಡಿಮೆ ಮಾಡುತ್ತಿದ್ದೇವೆ.



ಹಮೀದಾಬೇಗಂ ದೇಸಾಯಿ. ಸಂಕೇಶ್ವ

# ಅಹಿಂದ ಬಣ ತೊರೆದ ನಾಯಕರು : ಹಳೆಯ ಕಾಂಗ್ರೇಸಿಗರ 'ಕಾರುಭಾರು'

ಅ.ಶ. ಸುದ್ದಿ ಬೆಂಗಳೂರು



**ಬೆಂಗಳೂರು: ಮಾಜಿ ಸಿಎಂ ಸಿದ್ದರಾಮಯ್ಯ ಅವರೊಂದಿಗೆ ಕೈಜೋಡಿಸಿದ ಅಹಿಂದ ನಾಯಕರು ಈಗ ಹತಾಶರಾಗಿರುವಂತೆ ಕಾಣುತ್ತಿರುವುದರಿಂದ, ಮೂಲ ಕಾಂಗ್ರೆಸ್ ನಾಯಕರು ತಮ್ಮ ಒಗ್ಗಟ್ಟು ಪ್ರದರ್ಶಿಸುತ್ತಿದ್ದಾರೆ, ಪಕ್ಷ ಮತ್ತು ಸರ್ಕಾರದ ಮೇಲೆ ಹಿಡಿತ ಸಾಧಿಸುತ್ತಿದ್ದಾರೆ.**

ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಮತ್ತು ಕೆಪಿಸಿಸಿ ಅಧ್ಯಕ್ಷ ಬಿ ಕೆ ಹರಿಪ್ರಸಾದ್ ಸೇರಿದಂತೆ "ಮೂಲ ಕಾಂಗ್ರೆಸ್ ನಾಯಕರು ಆಡಳಿತ ನಡೆಸುತ್ತಿದ್ದಾರೆ ಎಂದು ಉಪಮುಖ್ಯಮಂತ್ರಿ ಡಾ ಜಿ ಪರಮೇಶ್ವರ ಭಾನುವಾರ ಹೇಳಿದ್ದರು, ಅದರ ಅರ್ಥ ಅವರು ಸಿಎಂಗೆ ಸಂಪೂರ್ಣ ಬೆಂಬಲ ನೀಡಿದ್ದ ಒಟ್ಟಾಗಿ ಕೆಲಸ ಮಾಡುವುದು ಮತ್ತು ಪಕ್ಷವನ್ನು ಬಲಪಡಿಸಿ 2028 ರಲ್ಲಿ ಮತ್ತೆ ಅಧಿಕಾರಕ್ಕೆ ತರುವುದು ಎಂದು ಹೇಳಿದರು.

ನಾವು ಕಾಂಗ್ರೆಸ್‌ನಲ್ಲಿ ಸಾಮಾನ್ಯ ಕಾರ್ಯಕರ್ತರಾಗಿ ನಮ್ಮ ರಾಜಕೀಯ ಪ್ರಾರಂಭಿಸಿದ್ದೇವೆ ಮತ್ತು ಈಗ ಸಿಎಂ ಮತ್ತು ಉಪ ಮುಖ್ಯಮಂತ್ರಿಯಾಗಿ ಕೆಲಸ ಮಾಡುತ್ತಿದ್ದೇವೆ. ನಾವಿಬ್ಬರೂ ಮೂಲ ಕಾಂಗ್ರೆಸ್ ಕಾರ್ಯಕರ್ತರು ಎಂದು ಅವರು ತಮ್ಮ ಕೊರಟಗೆರೆ ಕ್ಷೇತ್ರದಲ್ಲಿ ನಡೆದ ರ್ಯಾಲಿಯಲ್ಲಿ ಹೇಳಿದ್ದರು. ಕೆಪಿಸಿಸಿ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿರುವ ಬಿ ಕೆ ಹರಿಪ್ರಸಾದ್ ಕೂಡ ಅಪ್ಪಟ ಕಾಂಗ್ರೆಸ್ಸಿಗ. 2028 ರಲ್ಲಿ ಕಾಂಗ್ರೆಸ್ ತತ್ವಗಳು ಮತ್ತು ಸಿದ್ಧಾಂತದ ಆಧಾರದ ಮೇಲೆ ಜನಪರ ಆಡಳಿತ ನೀಡುವ ಮೂಲಕ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರಲು ನಾವು ಬದ್ಧರಾಗಿದ್ದೇವೆ" ಎಂದು ಅವರು ಹೇಳಿದರು.

ಸಿದ್ದರಾಮಯ್ಯ ಪಾಳಯದಿಂದ ಸಂಭಾವ್ಯ ಸಿಎಂ ಎಂದು ಬಿಂಬಿಸಲ್ಪಟ್ಟಿದ್ದ ಪರಮೇಶ್ವರ್, ಡಿಸಿಎಂ ಹುದ್ದೆಯನ್ನು ಪಡೆಯುವಲ್ಲಿ ಯಶಸ್ವಿಯಾದರು. ಆದರೆ ಸಿದ್ದರಾಮಯ್ಯ ಆಪ್ತರಾದ ಸತೀಶ್ ಜಾರಕಿಹೊಳಿ, ಡಾ. ಎಚ್.ಸಿ. ಮಹದೇವಪ್ಪ ಮತ್ತು ಜಮೀರ್ ಅಹ್ಮದ್ ಖಾನ್ ಅವರಿಗೆ ಅವರು ಬಯಸಿದ್ದನ್ನು ಪಡೆಯಲು ಸಾಧ್ಯವಾಗಲಿಲ್ಲ. ಸತೀಶ್ ಕೆಪಿಸಿಸಿ ಅಧ್ಯಕ್ಷರಾಗುವ ವಿಶ್ವಾಸ ಹೊಂದಿದ್ದರು ಆದರೆ ತಮ್ಮ ಮೂಲ ಲೋಕೋಪಯೋಗಿ ಇಲಾಖೆಯ ಖಾತೆಗೆ ತೃಪ್ತಿಪಟ್ಟರು. ಮಹಾದೇವಪ್ಪ ಮತ್ತು ಜಮೀರ್ ಅವರಿಗೆ ಸ್ಥಾನ ಸಿಗಲಿಲ್ಲ, ಈಗ ಸಚಿವ ಸ್ಥಾನಕ್ಕಾಗಿ ಒತ್ತಾಯಿಸಿ ರ್ಯಾಲಿಗಳನ್ನು ಪ್ರಾಯೋಜಿಸುತ್ತಿದ್ದಾರೆ.

ಆದರೆ ಸಂತೋಷ್ ಲಾಡ್ ಶಿವಕುಮಾರ್ ಅವರೊಂದಿಗೆ ಹೊಂದಾಣಿಕೆ ಮಾಡಿಕೊಂಡಿದ್ದಾರೆ. ಆಪ್ತ ಬೆಂಬಲಿಗರೊಂದಿಗೆ ಸಿದ್ದರಾಮಯ್ಯ ಅವರ ಸಂಬಂಧ ಹದಗೆಟ್ಟಿದೆ ಎಂದು ಮೂಲಗಳು ತಿಳಿಸಿವೆ, ಏಕೆಂದರೆ ಅವರು ಸಚಿವ ಸ್ಥಾನಗಳಿಗೆ ಅವರನ್ನು ಬೆಂಬಲಿಸಲಿಲ್ಲ. ಆದರೆ ಸತೀಶ್ ಅಹಿಂದ ಪಡೆಯನ್ನು ಪುನರುಜ್ಜೀವನಗೊಳಿಸುವ ಭರವಸೆ ಹೊಂದಿದ್ದಾರೆ. ಸಿದ್ದರಾಮಯ್ಯ ಪಾಳಯದ ಹೆಚ್ಚಿನ ನಾಯಕರು ಅಸಮಾಧಾನಗೊಂಡು ತಮ್ಮ ನಿಷ್ಠೆ ಬದಲಾಯಿಸಿದರು, ಇದರಿಂದ ಯಾವುದೇ ಭಿನ್ನಾಭಿಪ್ರಾಯಗಳಿಲ್ಲದೆ ಶಿವಕುಮಾರ್ ಆಡಳಿತದ ಮೇಲೆ ಗಮನಹರಿಸಲು ಸಾಕಷ್ಟು ದಾರಿ ಮಾಡಿಕೊಟ್ಟಿದೆ. ಸಿದ್ದರಾಮಯ್ಯ ಅವರ ಪುತ್ರ ಡಾ. ಯತೀಂದ್ರ ಅವರನ್ನು ಸಂಪುಟಕ್ಕೆ ಸೇರಿಸಿಕೊಂಡಿದ್ದು ಒಂದು ಅದ್ಭುತ ಪ್ರಯತ್ನವಾಗಿದ್ದು, ಸರ್ಕಾರಕ್ಕೆ ವಿಮೆಯಂತೆ ಕೆಲಸ ಮಾಡುತ್ತದೆ" ಎಂದು ಕಾಂಗ್ರೆಸ್ ನಾಯಕರೊಬ್ಬರು ಅಭಿಪ್ರಾಯ ಪಟ್ಟಿದ್ದಾರೆ.

## ವಿಜಾಪುರ :ಮತ್ತೊಂದು ಸಚಿವ ಸ್ಥಾನ

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ವಿಜಯಪುರ ಜಿಲ್ಲೆಗೆ ಮತ್ತೊಂದು ಸಚಿವ ಸ್ಥಾನ ನೀಡಬೇಕು ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ತಿಳಿಸಿದರು.ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿಜಯಪುರ ಜಿಲ್ಲೆಯಲ್ಲಿ ಐವರು ಶಾಸಕರಿದ್ದು, ಇಂತವರಿಗೆ ಸಚಿವ ಸ್ಥಾನ ಕೊಡಿ ಎಂದು ಹೇಳುವುದಿಲ್ಲ. ಯಾರಿಗೆ ಸಚಿವ ಸ್ಥಾನ ನೀಡಬೇಕೆಂಬುದು ಪಕ್ಷದ ಹೈಕಮಾಂಡ್ ಹಾಗೂ ಮುಖ್ಯಮಂತ್ರಿಗಳ ವಿವೇಚನೆಗೆ ಬಿಟ್ಟ ವಿಚಾರ. ಕೇಳುವುದು ಮಾತ್ರ ನಮ ಕರ್ತವ್ಯ ಎಂದರು.**



ಎಲ್ಲಾ ಶಾಸಕರೂ ಸಚಿವರಾಗಲು ಅರ್ಹರಿದ್ದು, ಸಚಿವ ಸ್ಥಾನ ಕೇಳುವುದರಲ್ಲಿ ತಪ್ಪಿಲ್ಲ. ಸಚಿವಾಕಾಂಕ್ಷಿಗಳು ಸಚಿವ ಸ್ಥಾನಕ್ಕಾಗಿ ಬೇಡಿಕೆ ಇಡುವುದು ತಪ್ಪಿಲ್ಲ. ಇದರ ಬಗ್ಗೆ ಹೈಕಮಾಂಡ್ ಸೂಕ್ತ ತೀರ್ಮಾನ ಕೈಗೊಳ್ಳುತ್ತದೆ ಎಂದು ಹೇಳಿದರು. ಬೆಂಗಳೂರು ಅಭಿವೃದ್ಧಿ ಸಚಿವ ಶಿಸ್ತಿನ ಸಿಪಾಯಿಯಾಗಿದ್ದು, ಮಂತ್ರಿ ಮಾಡದಿದ್ದರೂ ಪರವಾಗಿಲ್ಲ ಎಂದಿದ್ದರು. ಅಸಮಾಧಾನದ ವಿಚಾರದ ಬಗ್ಗೆ ಹೈಕಮಾಂಡ್ ನಿರ್ಧಾರ ಮಾಡಲಿದೆ ಎಂದರು. ಮೃತಪಟ್ಟವರಿಗೆ, ಅನರ್ಹರಿಗೆ ಗ್ಯಾರಂಟಿ ಯೋಜನೆ ಫಲ ದೊರೆಯುವುದನ್ನು ತಪ್ಪಿಸಲು ಪರಿಷ್ಕರಣೆ ಮಾಡಲಾಗುತ್ತಿದೆ. ಬಿಜೆಪಿಯವರು ನಮ ಗ್ಯಾರಂಟಿ ವಿರೋಧಿಸುತ್ತಾ ಬೇರೆ ರಾಜ್ಯಗಳಲ್ಲಿ ಅದನ್ನು ಜಾರಿ ಮಾಡಿದ್ದಾರೆ ಎಂದು ಆರೋಪಿಸಿದರು. ದೇಶದ ಆರ್ಥಿಕ ಪರಿಸ್ಥಿತಿ ಬಗ್ಗೆ ಶ್ವೇತಪತ್ರ ಹೊರಡಿಸಲು ಪ್ರಧಾನಿಯವರನ್ನು ಬಿಜೆಪಿಯವರು ಆಗ್ರಹಿಸಲಿ. ಪೆಟ್ರೋಲ್, ಡೀಸೆಲ್, ಅಡುಗೆ ಅನಿಲದ ಬೆಲೆಗಳು ಹೆಚ್ಚಾಗಿವೆ. ಅಚ್ಛೇ ದಿನ್ ಇನ್ನೂ ಬಂದಿಲ್ಲ ಎಂದು ಟೀಕಿಸಿದರು. ವಿಧಾನಸಭೆಯಿಂದ ವಿಧಾನಪರಿಷತ್‌ಗೆ ನಡೆಯುವ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಐವರು ಅಭ್ಯರ್ಥಿಗಳನ್ನು ಕಣಕ್ಕಿಳಿಸಲಾಗಿದೆ. ನಮಗೆ ಯಾವುದೇ ರೀತಿಯ ಆತಂಕ ಇಲ್ಲ. ಅದು ಬೇರೆಯವರಿಗೆ ಇರಬೇಕು. 10 ರಿಂದ 15 ಶಾಸಕರು ಕೇಂದ್ರ ಸಚಿವ ಕುಮಾರಸ್ವಾಮಿಯವರ ಸಂಪರ್ಕದಲ್ಲಿದ್ದಾರೆ ಎಂಬ ಊಹಾಪೋಹ ಹಬ್ಬಿಸುವ ಕೆಲಸವಾಗುತ್ತಿದೆ. ಇದು ರಿವರ್ಸ್ ಆಗಿರಬೇಕು ಎಂದರು. ಇಂದು ನಡೆಯುವ ಶಾಸಕಾಂಗ ಪಕ್ಷದ ಸಭೆಯಲ್ಲಿ ಚುನಾವಣೆ ಕುರಿತಂತೆ ಚರ್ಚೆ ಮಾಡುತ್ತೇವೆ. ನಮಲ್ಲಿ ಯಾವುದೇ ರೀತಿಯ ಗೊಂದಲವಿಲ್ಲ. ಸಿದ್ದರಾಮಯ್ಯನವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿ ಯುವಕರಿಗೆ ಅವಕಾಶ ಮಾಡಿಕೊಡಿ ಎಂದು ಹೈಕಮಾಂಡ್ ಹೇಳಿತ್ತು. ಅದರಂತೆ ನಡೆದುಕೊಂಡಿದ್ದಾರೆ. ರಾಜೀನಾಮೆ ನಂತರ ಅವರ ವರ್ಚಸ್ಸು ವೃದ್ಧಿಸಿದೆ ಎಂದು ಪಾಟೀಲ್ ಹೇಳಿದರು.

## ಹಾಡೋನಹಳ್ಳಿ ಗ್ರಾಮ ಪಂಚಾಯಿತಿಗೆ ಸಿಇಒ ಭೇಟಿ, ಪರಿಶೀಲನೆ

ಅ.ಶ. ಸುದ್ದಿ ದೇವನಹಳ್ಳಿ

**ದೇವನಹಳ್ಳಿ: ದೊಡ್ಡಬಳ್ಳಾಪುರ ತಾಲ್ಲೂಕಿನ ಹಾಡೋನಹಳ್ಳಿ ಗ್ರಾಮ ಪಂಚಾಯಿತಿಗೆ ಇಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ವಾಸಂತಿ ಅಮರ್ ಬಿ ವಿ ಅವರು ಭೇಟಿ ನೀಡಿ ವಿವಿಧ ಅಭಿವೃದ್ಧಿ ಕಾಮಗಾರಿಗಳು ಹಾಗೂ ಆಡಳಿತಾತ್ಮಕ ಕಾರ್ಯಗಳ ಪರಿಶೀಲನೆ ನಡೆಸಿದರು.**



ಹಾಡೋನಹಳ್ಳಿ ಗ್ರಾಮದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಗುಲಾಬಿ ತೋಟಕ್ಕೆ ಭೇಟಿ ನೀಡಿ ರೈತ ಸಮಲೋಚಿಸಿದರು. ನರೇಗಾ ಸಂಬಂಧಿಸಿದ ಕಡತಗಳನ್ನು ಪರಿಶೀಲಿಸಿದ ಅವರು, ಯೋಜನೆಯ ಮಾರ್ಗಸೂಚಿಗಳು ಹಾಗೂ ಚೆಕ್‌ಲಿಸ್ಟ್ ಪ್ರಕಾರ ದಾಖಲೆಗಳನ್ನು ನಿರ್ವಹಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಬಳಿಕ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪೆರಮಗೊಂಡನಹಳ್ಳಿ ಶಾಲಾ ಶೌಚಾಲಯ, ಕಾಂಪೌಂಡ್, ದನ ಶೆಡ್ ನರೇಗಾ ಕಾಮಗಾರಿಗಳ ಸ್ಥಳ ಪರಿಶೀಲನೆ ನಡೆಸಿ, ಕಾಮಗಾರಿಗಳನ್ನು ನಿಯಮಾನುಸಾರ ಅನುಷ್ಠಾನಗೊಳಿಸಿ ಗುಣಮಟ್ಟ ಕಾಪಾಡಿಕೊಳ್ಳುವಂತೆ ನಿರ್ದೇಶನ ನೀಡಿದರು.

ಇದೇ ವೇಳೆ ಗ್ರಾಮ ಪಂಚಾಯಿತಿಯಲ್ಲಿ ಕಂದಾಯ ವಸೂಲಾತಿ ಪ್ರಗತಿ ಕುರಿತು ಮಾಹಿತಿ ಪಡೆದ ಸಿಇಒ ಅವರು, ಸಿಬ್ಬಂದಿ ಹಾಜರಾತಿಯನ್ನು ಪರಿಶೀಲಿಸಿದರು. ಪಿಡಿಒ ಹಾಗೂ ಸಿಬ್ಬಂದಿ ಸರಿಯಾದ ಸಮಯಕ್ಕೆ ಕರ್ತವ್ಯಕ್ಕೆ ಹಾಜರಾಗಿ ಸಾರ್ವಜನಿಕರೊಂದಿಗೆ ಉತ್ತಮ ಒಡನಾಟ ಹೊಂದಿರಬೇಕು. ಸಾರ್ವಜನಿಕರಿಗೆ ಯಾವುದೇ ತೊಂದರೆ ಆಗದಂತೆ ಜವಾಬ್ದಾರಿಯುತವಾಗಿ ಕರ್ತವ್ಯ ನಿರ್ವಹಿಸಬೇಕು ಎಂದು ತಿಳಿಸಿದರು. ಸಾರ್ವಜನಿಕರಿಂದ ಅರ್ಜಿಗಳನ್ನು ಸ್ವೀಕರಿಸಿ ಸಮಸ್ಯೆಗಳ ಕುಡಿಯುವ ನೀರು, ರಸ್ತೆ, ವಸತಿ ಯೋಜನೆ, ಪಿಂಚಣಿ, ಉದ್ಯೋಗ ಖಾತ್ರಿ ಹಾಗೂ ಮೂಲಸೌಕರ್ಯಗಳಿಗೆ ಸಂಬಂಧಿಸಿದ ಅರ್ಜಿಗಳನ್ನು ಸ್ವೀಕರಿಸಿ, ಪರಿಶೀಲನೆ ನಡೆಸಿದರು.

ಸ್ಥಳದಲ್ಲೇ ಆದೇಶ ಸಮಸ್ಯೆಗಳನ್ನು ಆಲಿಸಿದ ನಂತರ, ಸಂಬಂಧಪಟ್ಟ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಮತ್ತು ಸಿಬ್ಬಂದಿಗೆ ತ್ವರಿತವಾಗಿ ಕ್ರಮ ಕೈಗೊಳ್ಳುವಂತೆ ಕಟ್ಟುನಿಟ್ಟಿನ ಸೂಚನೆ ನೀಡದರು. ಗ್ರಾಮ ಪಂಚಾಯಿತಿಯಲ್ಲಿ ಜಲ ಜೀವನ್ ಮೀಷನ್ ಇನ್ನಷ್ಟು ಪರಿಣಾಮಕಾರಿಯಾಗಿ ಕಾರ್ಯಗಾತಗೊಳಿಸಿ ಎಂದು ಪಂಚಾಯಿತಿ ಅಧಿಕಾರಿಗಳಿಗೆ ಸೂಚನೆ ನೀಡಿದರು. ಈ ಸಂದರ್ಭದಲ್ಲಿ ಪಿಡಿಒ ಗ್ರಾಮ ಪಂಚಾಯಿತಿ ಸಿಬ್ಬಂದಿ, ನರೇಗಾ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಜಮೀರ್ ಬೆಂಬಲಿಗರಿಂದ ವಿಧಾನಸೌಧಕ್ಕೆ ಮುತ್ತಿಗೆ ಯತ್ನ ? ವಶಕ್ಕೆ



ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ಮಾಜಿ ಸಚಿವ ಜಮೀರ್ ಅಹ್ಮದ್ ಖಾನ್ ಅವರ ಬೆಂಬಲಿಗರು ತಮ್ಮ ನಾಯಕನಿಗೆ ಉಪ ಮುಖ್ಯಮಂತ್ರಿ ಹುದ್ದೆ ನೀಡಬೇಕೆಂದು ಆಗ್ರಹಿಸಿ ಭಾರೀ ಪ್ರತಿಭಟನೆ ನಡೆಸಿದರು. ವಿಧಾನಸೌಧದತ್ತ ಪಾದಯಾತ್ರೆ ನಡೆಸಿ ಧರಣಿ ನಡೆಸುವ ಯೋಜನೆ ಹೊಂದಿದ್ದ ಕಾರಣ,ಪೊಲೀಸರು ಕೆಲವರನ್ನು ಮುನ್ನೆಚ್ಚರಿಕಾ ವಶಕ್ಕೆ ಪಡೆದರು.**

ಮುಂದಿನ ಸಚಿವ ಸಂಪುಟ ವಿಸ್ತರಣೆಯ ಹಂತದಲ್ಲಿ, ಜೂನ್ 18ರಂದು ನಡೆಯುವ ಏಳು ಎಂಎಲ್‌ಸಿ ಸ್ಥಾನಗಳ ಚುನಾವಣೆಯ ನಂತರ, ಅವರು ಡಿ ಕೆ ಶಿವಕುಮಾರ್ ಅವರ ಸಂಪುಟಕ್ಕೆ ಸೇರುವ ಪ್ರಯತ್ನಗಳಲ್ಲಿ ತೊಡಗಿದ್ದಾರೆ. ಮಾಜಿ ಕಾರ್ಪೊರೇಟರ್ ಇಮ್ರಾನ್ ಪಾಷಾ ನೇತೃತ್ವದಲ್ಲಿ, ಜಮೀರ್ ಅವರ ಚಾಮರಾಜಪೇಟೆ ಕ್ಷೇತ್ರದ ಪಾದರಾಯನ ಪುರದಲ್ಲಿ 2,000ಕ್ಕೂ ಹೆಚ್ಚು ಪ್ರತಿಭಟನಾಕಾರರು ಸೇರಿ ಅವರ ಪರ ಘೋಷಣೆಗಳನ್ನು ಕೂಗಿದರು. ಪರಿಸ್ಥಿತಿಯನ್ನು ನಿಯಂತ್ರಿಸಲು ಪೊಲೀಸರಿಗೆ ಕಷ್ಟವಾಗಿಯಿತು, ಪ್ರತಿಭಟನೆಯನ್ನು ಫ್ರೀಡಂ ಪಾರ್ಕ್‌ನಲ್ಲಿ ನಡೆಸುವಂತೆ ಸಲಹೆ ನೀಡಲಾಯಿತು.

ಸಾವಿರಕ್ಕೂ ಹೆಚ್ಚು ಪೊಲೀಸರ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು. ಜಮೀರ್ ಅವರ ಬೆಂಬಲಿಗರು ಈ ಹಿಂದೆ ಕೂಡ ರಾಜ್ಯದ ವಿವಿಧ ಭಾಗಗಳಲ್ಲಿ ಇಂತಹ ಪ್ರತಿಭಟನೆಗಳನ್ನು ನಡೆಸಿದ್ದಾರೆ. ಜೂನ್ 3ರಂದು ದಾವಣಗೆರೆ ದಕ್ಷಿಣ ಉಪಚುನಾವಣೆ ಸಂಬಂಧಿತವಾಗಿ ಜಮೀರ್ ಅವರ ವಿರುದ್ಧದ ಆರೋಪಗಳ ಆಡಿಯೋ ಟೇಪ್ ಹರಿದಾಡಿದ್ದು, ಡಿ ಕೆ ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುವ ಒಂದು ದಿನ ಮುಂಚೆ ಇದು ಹೊರಬಂದಿತ್ತು; ಇದರಿಂದ ಅವರ ಸಚಿವ ಸ್ಥಾನ ಸಾಧ್ಯತೆಗಳಿಗೆ ಅಡ್ಡಿಯಾಯಿತು ಎಂದು ಹೇಳಲಾಗುತ್ತಿದೆ.

ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ವಿಧಾನಸೌಧದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಮುಖ್ಯಮಂತ್ರಿ ಅವರೊಂದಿಗೆ ಚರ್ಚೆ ನಡೆಸಿ ಜಮೀರ್ ಅವರ ಹೆಸರನ್ನು ಮುಂದಿನ ಸಂಪುಟ ವಿಸ್ತರಣೆಗೆ ಶಿಫಾರಸು ಮಾಡಿರುವುದಾಗಿ ಹೇಳಿದರು. ಹಿಂದಿನ ಬಾರಿ ಇಬ್ಬರು ಮುಸ್ಲಿಂರಿಗೆ ಸಚಿವ ಸ್ಥಾನ ನೀಡಲಾಗಿತ್ತು. ಈ ಬಾರಿ ಮೂವರಿಗೆ ಅವಕಾಶ ನೀಡಬೇಕು ಎಂದು ನಾವು ಒತ್ತಾಯಿಸಿದ್ದೇವೆ, ಅದರಲ್ಲಿ ಜಮೀರ್ ಕೂಡ ಒಬ್ಬರು. ನಮ್ಮ ಪ್ರಮುಖ ಮತದಾರರಾದ ಮುಸ್ಲಿಮರಿಗೆ ಪ್ರಾತಿನಿಧ್ಯ ಹೆಚ್ಚಿಸುವ ಅಗತ್ಯವಿದೆ ಎಂದು ಹೇಳಿದರು.

# ರೈತರ ಬಡ್ಡಿ ರಹಿತ ಸಾಲ ಸೌಲಭ್ಯದ ದುರುಪಯೋಗಕ್ಕೆ ಕಡಿವಾಣ ಹಾಕಿ : ಅಧಿಕಾರಿಗಳಿಗೆ ಸಿಎಂ ಡಿ.ಕೆ.ಶಿವಕುಮಾರ್ ಸೂಚನೆ

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ರಾಜ್ಯದಲ್ಲಿ ಒಬ್ಬ ರೈತನಿಗೂ ವಂಚನೆ ಆಗಲು ಬಿಡಬಾರದು. ಅದರಂತೆ 5 ಲಕ್ಷದವರೆಗೂ ಬಡ್ಡಿ ರಹಿತ ಸಾಲ ಸೌಲಭ್ಯ ದುರುಪಯೋಗ ಆಗದಂತೆ ಕಡಿವಾಣ ಹಾಕಬೇಕು ಎಂದು ಅಧಿಕಾರಿಗಳಿಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೂಚನೆ ನೀಡಿದ್ದಾರೆ. ಸೋಮವಾರ ವಿಧಾನಸೌಧ ಸಮಿತಿ ಕೊಠಡಿಯಲ್ಲಿ ಕೃಷಿ ತೋಟಗಾರಿಕೆ, ರೇಷ್ಮೆ, ಮೀನುಗಾರಿಕೆ, ಸಹಕಾರ, ಕೃಷಿ ಮಾರುಕಟ್ಟೆ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ರೈತರಿಗೆ ಅಗತ್ಯ ಮಾಹಿತಿ ಪೂರೈಸಲು ಅಧಿಕಾರಿಗಳು ಮುಂದಾಗಬೇಕು ಎಂದು ಸೂಚನೆ ನೀಡಿದರು.**

ಅತಿವೃಷ್ಟಿ, ಅನಾವೃಷ್ಟಿ ಎದುರಿಸಲು ಸನ್ನದ್ಧರಾಗಬೇಕು. ಜತೆಗೆ, ಕ್ರಿಮಿನಾಶಕ ಮತ್ತಿತರ ಔಷಧ ಸಿಂಪರಣೆ ಸಲಕರಣೆಗಳ ನೆರವನ್ನು ರೈತರಿಗೆ ಒದಗಿಸಬೇಕು. ಅದೇ ರೀತಿ, ಕೃಷಿ ಹೊಂಡಗಳಿಗೆ ಬಿದ್ದು ಸಾವನ್ನಪ್ಪುವ ಘಟನೆಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಹೊಂಡಗಳಿಗೆ ಬೇಲಿ ನಿರ್ಮಿಸಲು ಅಗತ್ಯ ಕ್ರಮ ಕೈಗೊಳ್ಳಿ. ಇದಕ್ಕೆ ಹಣಕಾಸಿನ ನೆರವು ಸಂಬಂಧ ಅಗತ್ಯ ಯೋಜನೆ ರೂಪಿಸಿ ಎಂದು ಅವರು ಹೇಳಿದರು.



ಇತರೆ ರಾಜ್ಯಗಳಲ್ಲಿರುವ ಮಾದರಿ ಯೋಜನೆ, ಮಾರ್ಗಗಳನ್ನು ಅಧ್ಯಯನ ಮಾಡಿ ರಾಜ್ಯದ ಕೃಷಿ ಸಂಸ್ಕೃತಿ ಮತ್ತು ಬೆಳೆ ಮಾದರಿಗಳಿಗೆ ಅನುಗುಣವಾಗಿ ಕಾರ್ಯರೂಪಕ್ಕೆ ತನ್ನಿ. ಡ್ರೋಣ್, ಎಐ ಮತ್ತಿತರ ಆಧುನಿಕ ತಂತ್ರಜ್ಞಾನವನ್ನು ರೈತರಿಗೆ ತಲುಪಿಸುವ ವ್ಯವಸ್ಥೆ ಮಾಡಿ.

ಪ್ರಕೃತಿ ವೈಪರೀತ್ಯಗಳಿಂದ ರೈತರ ಕೃಷಿ ಚಟುವಟಿಕೆಗೆ ತೊಂದರೆ ಆಗದಂತೆ ಕ್ರಮ ವಹಿಸಿ. ತಾಲೂಕು ಮತ್ತು ಹೋಬಳಿ ಮಟ್ಟದಲ್ಲಿ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಿ. ಪ್ರಾಥಮಿಕ ಕೃಷಿ ಜತೆ ಸೆಕೆಂಡರಿ ಕೃಷಿ ಸೇರಿದಂತೆ ರೈತರ ಆದಾಯ ಹೆಚ್ಚಿಸಲು ಈಗಾಗಲೇ ಸೂಚಿಸಿರುವ ಕ್ರಮಗಳನ್ನು ಸಮರ್ಪಕವಾಗಿ ಜಾರಿ ಮಾಡಿ ಎಂದು ಅಧಿಕಾರಿಗಳಿಗೆ ಹೇಳಿದರು.

ಕೃಷಿ ಇಲಾಖೆ ಅಧೀನದಲ್ಲಿರುವ ಐದು ನಿಗಮ ಮತ್ತು ಮಂಡಳಿಗಳ ಸ್ಥಿತಿಗತಿಯ ಅಧ್ಯಯನ ನಡೆಸಿ ವರದಿ ಸಲ್ಲಿಸಬೇಕು. ರೈತರಿಗೆ ನೀಡಬೇಕಾದ ಪೂರಕ ಮಾಹಿತಿಗಳನ್ನು ವರದಿಯಲ್ಲಿ ಉಲ್ಲೇಖಿಸಬೇಕು. ರಾಜ್ಯದಲ್ಲಿರುವ ಕೋಲ್ಡ್ ಸ್ಟೋರೇಜ್ ಮತ್ತು ಗೋದಾಮುಗಳು ಬಗ್ಗೆ ಪಟ್ಟಿ ನೀಡಬೇಕು. ರೈತರಿಗೆ ಸಬ್ಸಿಡಿ ದರದಲ್ಲಿ ಕೊಟ್ಟಿರುವ ಸವಲತ್ತುಗಳು ಎಷ್ಟು ಪ್ರಯೋಜನಕಾರಿಯಾಗಿವೆ ಎನ್ನುವ ಬಗ್ಗೆ ಪರಿಶೀಲನೆ ನಡೆಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಬ್ಸಿಡಿ ನೀಡಿರುವ ಉದ್ದೇಶ ಜಾರಿ ಆಗುತ್ತಿದೆಯೇ ಎಂಬುದರ ಬಗ್ಗೆ ವರದಿ ನೀಡಬೇಕು ಎಂದ ಅವರು, ಕೇಂದ್ರ ಸರಕಾರ ಪ್ರಾಯೋಜಿತ ಯೋಜನೆಗಳು ಎಷ್ಟರ ಮಟ್ಟಿಗೆ ಜಾರಿ ಆಗುತ್ತಿದೆ ಎನ್ನುವ ಬಗ್ಗೆ ವರದಿ ಸಲ್ಲಿಸಿ. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಸೇರಿದ ಜಾಗಗಳು ಸುರಕ್ಷಿತವಾಗಿರಬೇಕು. ಇದಕ್ಕಾಗಿ ತಡೆಗೋಡೆ ಹಾಕಿಸಿ ಈ ಬಗ್ಗೆ ಕ್ರಮ ಕೈಗೊಳ್ಳಿ ಎಂದು ಶಿವಕುಮಾರ್ ತಿಳಿಸಿದರು. ಸಹಕಾರ ಇಲಾಖೆ ಅಡಿಯಲ್ಲಿ ಯಾವ ಸಂಸ್ಥೆಗಳಿಗೆ ಚುನಾವಣೆ ಆಗಬೇಕಿದೆಯೋ ಎಲ್ಲದಕ್ಕೂ ಚುನಾವಣೆ ನಡೆಸಬೇಕು ಎಂದೂ ಸಭೆಯಲ್ಲಿ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸೂಚನೆ ನೀಡಿದರು. ಈ ವೇಳೆ ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಸಿಎಂ ಆರ್ಥಿಕ ಸಲಹೆಗಾರ ಎಲ್.ಕೆ.ಅತೀಕ್, ಅಪರ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್, ಸಹಕಾರ ಇಲಾಖೆ ಶೆಟ್ಟಣ್ಣನವರ್, ಎಪಿಎಂಸಿ ನಿರ್ದೇಶಕ ಡಾ.ನಲ್ಲಕುಂಟೆ ವೆಂಕಟೇಶಯ್ಯ ಮತ್ತಿತರರು ಭಾಗವಹಿಸಿದ್ದರು.

1,068 ಕೋಟಿ ರೂ., ಮಾವು ಬೆಳೆ ನಾಶ : ಈ ವರ್ಷ 1068 ಕೋಟಿ ಮಾವು ಬೆಳೆ ನಾಶ ಆಗಿದೆ. ಈ ಪೈಕಿ ಶೇ.25ರಷ್ಟು ಅಂದರೆ 229 ಕೋಟಿ ರೂ. ಪರಿಹಾರ ಕೊಡಬೇಕಿದೆ. ರಾಜ್ಯ ಸರಕಾರ 114 ಕೋಟಿ ರೂ., ಹಾಗೂ ಕೇಂದ್ರ ಸರಕಾರ 115 ಕೋಟಿ ರೂ., ನಷ್ಟ ಪರಿಹಾರ ಭರಿಸಬೇಕಿದೆ. ಈ ಸಂಬಂಧ ಕಾನೂನು ಪ್ರಕಾರ ಮಾವು ಬೆಳೆಗಾರರಿಗೆ ನಷ್ಟ ಪರಿಹಾರ ಸಿಗುವಂತೆ ನೋಡಿಕೊಳ್ಳಿ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಧಿಕಾರಿಗಳಿಗೆ ಸೂಚಿಸಿದರು. 'ರಾಜ್ಯದಲ್ಲಿ ಬರ ಪರಿಸ್ಥಿತಿ ಎದುರಿಸುವ ಆತಂಕವೂ ಇದೆ. ಈ ನಿಟ್ಟಿನಲ್ಲಿ ತುರ್ತು ಕ್ರಮಗಳ ಪೂರ್ವಸಿದ್ಧತೆ ಕೈಗೊಳ್ಳಬೇಕು' ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಧಿಕಾರಿಗಳಿಗೆ ಸೂಚಿಸಿದರು.

AJATHA SHATHRU KANNADA DAILY MORNING Editor, Printer, Publisher, & Owned by : PRADEEP KUMAR H.No. 2/77/1, Godi nilaya, Halli street, 1st ward,Mainahalli, Koppal-583238, Dist : Koppal- Karnataka Printed at : Goditechnologies, H.No. 2/77/1, Godi nilaya, Halli street, 1st ward,Mainahalli, Koppal-583238, Karnataka